
ಕಲ್ಯಾಣ ಕಿರಣ

ಅಕ್ಟೋಬರ್-2008 ಬೆಲೆ-10.00





ಸಂಪುಟ-38 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-9 ಅಕ್ಟೋಬರ್ 2008 ವಾರ್ಷಿಕ ಚಂದಾ 100/- ರೂ.

ಕಲ್ಯಾಣ ಪರ್ವಕ್ಕೆ ಆಹ್ವಾನ

ಬಾ ಬಾ ಬಾ ಎಲೆ ಶರಣ ನೀನು......
ಕಲ್ಯಾಣ ಪರ್ವಕೆ ಬಂದು ಪಾವನನಾಗು ॥ ಪ ॥
ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ ॥

ಅಂದು ಆದಿಯಲಿ ಧರ್ಮ ಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವ ಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಚನ್ನಣ್ಣ ಮಾಚಯ್ಯ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹತ್ಯಾಗ ಅರಿಯೆಯಾ? ॥ 4 ॥

ಬಸವ ಕಲ್ಯಾಣವು ಶರಣ ಭೂಮಿಯು ಎಂದು
ಕಲ್ಯಾಣ ಪರ್ವಕೆ ಬಂದು ಶರಣ ಸ್ಮರಣೆಯ ಮಾಡು
ಬಸವ ಗುರು ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ನೀ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ವವ ತಿಳಿದು ವಿಶ್ವ ಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಬಸವಾತ್ಮಜೆಯಾದ ಮಾತೆಯ ಕರೆಯಿದು. ॥ 6 ॥

- ಬಸವಾತ್ಮಜೆ

ಹರನಾಜ್ಞೆಯಿಂದ ಯರಕದಾಜ್ಞೆಗಳೆಂದು
ಕರುಳ ಕ್ಯಾತಯ್ಯ ಕೂಗಿ , ಬೊಬ್ಬೆಯನಿಟ್ಟು ಶರಣರೆಲ್ಲರಿಗೆ ಅರಿಕೆ ಮಾಡುತಲಿ
ಉಲಿದು ಕೂಗಿದನು, ಕಲ್ಯಾಣ ನಲಿವಂತೆ ಬಲಬಂತು ಎಮಗೆ
ಉಘೇ ಚಾಂಗು ಭಲಾ ಎಂದು ಘನ ಹಿರಿಯರೆಲ್ಲ ಉದಯದೋರುವರಿನ್ನು

(ಮಡಿವಾಳ ಮಾಚಿದೇವರ ಕಾಲಜ್ಞಾನದ ವಚನ)

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಅಕ್ಟೋಬರ್ ತಿಂಗಳಲ್ಲಿ ಬರುವ ಹಬ್ಬಗಳು

ಕಲ್ಯಾಣ ಪರ್ವ	-	ಅಕ್ಟೋಬರ್ 12, 13, 14ರಂದು
ಬಸವ ಧರ್ಮದ ವಿಜಯೋತ್ಸವ	-	ಅಕ್ಟೋಬರ್ 14
ಚನ್ನಬಸವಣ್ಣನವರ ಜಯಂತಿ	-	ಅಕ್ಟೋಬರ್ 29 - ದೀಪಾವಳಿ ಪಾಡ್ಯ
ವಚನ ದೀಪೋತ್ಸವ		

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ :

- ಮಾತಾಜಿ

ಕಲ್ಯಾಣ ಪರ್ವ - ಬಸವ ಧರ್ಮದ ಆಶಾಕಿರಣ

ಶರಣ ಬಂಧುಗಳೇ,

ಇಸ್ಲಾಮಿನ ಹಜ್, ವಾರಕರಿ ಪಂಥದವರ ವಾರ್ಷಿಕ ಸಮಾವೇಶಗಳಿಂದ ಪ್ರಭಾವಿತರಾಗಿ ನಾವು ಆರಂಭಿಸಿದ ಧಾರ್ಮಿಕ ಸಮಾವೇಶವಾದ ಶರಣ ಮೇಳ ನಿರೀಕ್ಷೆಗೆ ತಕ್ಕಂತೆ ವಿಸ್ತಾರಗೊಂಡು, ಫಲ ಕೊಡುತ್ತಿದೆ. ಇದರಿಂದ ಧರ್ಮಕ್ಷೇತ್ರ ಎಂದು ಗುರುತಿಸಲ್ಪಟ್ಟು 1988ರಲ್ಲಿ ಘೋಷಿಸಲ್ಪಟ್ಟ ಕೂಡಲ ಸಂಗಮದ ಕೀರ್ತಿ ವಿಸ್ತಾರಕ್ಕೂ ಶರಣ ಮೇಳ ಸಾಧನವಾಗಿದೆ. ಅದರಂತೆ ಶರಣ ಭೂಮಿ ಬಸವ ಕಲ್ಯಾಣ. ಈಗ ಮುಸುಕು ಹರಿದು ಬೆಳಗಬೇಕಾಗಿದೆ. ವಚನ ಸಾಹಿತ್ಯವನ್ನು ಓದಿದ ದೂರದವರು ಕಲ್ಯಾಣದ ಬಗ್ಗೆ ತಮ್ಮದೇ ಆದ ಕನಸುಗಳನ್ನು ಹೊಂದಿರುತ್ತಾರೆ. ಕೆಲವರು ಮೊದಲ ಬಾರಿ ಬಂದಾಗ ಭಾವುಕರಾಗಿ ನೆಲಕ್ಕೇ ನಮಸ್ಕರಿಸುತ್ತಾರೆ. ಮತ್ತೆ ಕೆಲವರು ಅದರ ಮಣ್ಣನ್ನು ತಲೆಯ ಮೇಲೆ ಹಾಕಿಕೊಳ್ಳುವಷ್ಟು ಉದ್ವೇಗಕ್ಕೆ ಒಳಗಾಗಿರುತ್ತಾರೆ. ಮತ್ತೆ ಕೆಲವರು ಕಲ್ಯಾಣದ ಶರಣರ ಪರಂಪರೆಯವರು ನಾವು ಎಂದು ಅಲ್ಲಿಯ ಕಲ್ಲಿನ ಚೂರು, ಮಣ್ಣು ಒಯ್ದು ಮನೆಯ ಅಡಿಪಾಯಕ್ಕೆ ಹಾಕಿಕೊಂಡದ್ದುಂಟು. ಇಂಥ ಭಾವನಾತ್ಮಕ ಬೆಸುಗೆ ಹೊಂದಿದ ತಾಣ ಕಲ್ಯಾಣ.

ಇಂಥ ಕಲ್ಯಾಣವು ಪುನಃ ಬೆಳಗಬೇಕೆಂಬ ಬಯಕೆ ಆದಿ ಶರಣರದು. ಅದು ಕೇವಲ ಬಯಕೆಯಷ್ಟೇ ಅಲ್ಲ ಅವರ ದಿವ್ಯ ಸಂಕಲ್ಪವೂ ಕೂಡ.
ಕರುಳ ಕ್ಯಾತಯ್ಯನೆಂಬ ಶರಣರು ಹೇಳುತ್ತಾರೆ:

ಹರನಾಜ್ಞೆಯಿಂದ ಯರಕದಾಜ್ಞೆಗಳೆಂದು
ಕರುಳ ಕ್ಯಾತಯ್ಯ ಕೂಗಿ, ಬೊಬ್ಬೆಯನಿಟ್ಟು ಶರಣರೆಲ್ಲರಿಗೆ ಅರಿಕೆ ಮಾಡುತಲಿ
ಉಲಿದು ಕೂಗಿದನು, ಕಲ್ಯಾಣ ನಲಿವಂತೆ ಬಲಬಂತು ಎಮಗೆ
ಉಘೇ ಚಾಂಗು ಭಲಾ ಎಂದು ಘನ ಹಿರಿಯರೆಲ್ಲ ಉದಯದೋರುವರಿನ್ನು

ಆದಿ ಶರಣರ ಸಂಕಲ್ಪ ಪೂರೈಸಬೇಕಾದರೆ 2 ಕರ್ತವ್ಯಗಳನ್ನು ನಾವು - ನೀವು ಮಾಡಬೇಕು. ಅವೆಂದರೆ

1. ಕಲ್ಯಾಣ ಪರ್ವದಲ್ಲಿ ತನು ಮನ ಧನಗಳನ್ನು ತೊಡಗಿಸಿ ಭಾಗಿಯಾಗುವುದು.
2. ಶರಣ ಭೂಮಿ ಬಸವ ಕಲ್ಯಾಣದಲ್ಲಿ ಆದಿ ಶರಣರ ಸ್ಮಾರಕಗಳನ್ನು ರಚಿಸುವುದು.

ಸ್ಥಾವರ - ಜಂಗಮಗಳೆರಡನ್ನೂ ಬೆಳೆಸುವುದು ಧರ್ಮ ಸಮಾಜಗಳ ಬೆಳವಣಿಗೆಗೆ ಪೂರಕ. ಜಂಗಮ ತತ್ವವನ್ನು ಬೆಳೆಸಲಿಕ್ಕಾಗಿಯೇ ಇರುವುದು ಕಲ್ಯಾಣ ಪರ್ವ. ಅನುಭವ ಮಂಟಪದ ಮೂಲಕ ಜನರಿಗೆ ಧರ್ಮಪಿತರು ಸಂಸ್ಕಾರವನ್ನು ನೀಡಿದರು. ಅದರಂತೆ ಬಸವ ಮಂಟಪಗಳನ್ನು ಕಟ್ಟಿ ಅವುಗಳ ಮೂಲಕ ನಿರಂತರವಾಗಿ ಧರ್ಮ ಸಂಸ್ಕಾರ ಕೊಡುವ ಕಾರ್ಯ ನಡೆಯಬೇಕು.

ಸಮಾಜದಲ್ಲಿ ಸಮಾನತೆ ಮತ್ತು ಸಹೋದರತೆ ತರಲು ಧರ್ಮಪಿತರು ನಿತ್ಯ ದಾಸೋಹ, ಗಣ ಪರ್ವಗಳ ವ್ಯವಸ್ಥೆ ಮಾಡಿದರು. ಅದೇ ರೀತಿ ಶರಣ ಮೇಳ ಮತ್ತು ಕಲ್ಯಾಣ ಪರ್ವಗಳು (ಮಹಾರಾಷ್ಟ್ರದ ಅಲ್ಲಮ ಗಿರಿಯಲ್ಲಿ ನಡೆಯುವ ಲಿಂಗಾಯತ ಗಣ ಮೇಳಾವ) ಅಂದಿನ ಗಣ ಪರ್ವಗಳ ಮಾದರಿಯಲ್ಲಿ ಇಂದು ನಡೆಯುತ್ತಿವೆ. ಆದ್ದರಿಂದ ಉದಾತ್ತ ಉದ್ದೇಶದಿಂದ, ಸಂಸ್ಕಾರ - ಸಂಘಟನೆಗಳ ದೃಷ್ಟಿಯಿಂದ ಏರ್ಪಡಿಸುತ್ತಿರುವ ಕಲ್ಯಾಣ ಪರ್ವದಲ್ಲಿ ತಪ್ಪದೆ ಭಾಗಿಗಳಾಗುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು.

ಪ್ರಾರ್ಥನೆ, ಇಷ್ಟಲಿಂಗಾರ್ಚನೆ, ಅನುಭವ ಗೋಷ್ಠಿ, ಶರಣ ವಂದನೆ ಕಲ್ಯಾಣ ಪರ್ವದ ವಿಶೇಷ. 3 ದಿವಸಗಳ ಅವಧಿಯ ಈ ಸಮಾವೇಶದಲ್ಲಿ ಪಡೆಯುವ ತರಬೇತಿಯಿಂದ ಶರಣ ಬಂಧುಗಳು ಸಂಸ್ಕಾರಗೊಂಡು ತಮ್ಮ ಊರುಗಳಲ್ಲಿ ರಾಷ್ಟ್ರೀಯ ಬಸವ ದಳ ಸ್ಥಾಪಿಸಿ, ಬಸವ ಮಂಟಪಗಳನ್ನು ನಿರ್ಮಿಸಿ ತನ್ಮೂಲಕ ಜನರಿಗೆ ಸಂಸ್ಕಾರ ನೀಡಬೇಕು.

ಹರಿದು ಹಂಚಿ ಹೋಗಿ, ಸಂಸ್ಕಾರ ವಿರಹಿತವಾಗಿರುವ ಲಿಂಗಾಯತ ಸಮಾಜವನ್ನು ಒಂದೆಡೆಗೆ ತರಲು ಇರುವ ವಿಶೇಷ ಸಮಾವೇಶಗಳು ಕಲ್ಯಾಣ ಪರ್ವ ಮತ್ತು ಶರಣ ಮೇಳ. ಆದ್ದರಿಂದ ಶರಣ ಬಂಧುಗಳು ಹೆಚ್ಚು ಜನರನ್ನು ಕರೆತರಲು ಪ್ರಯತ್ನ ಮಾಡಬೇಕು. ಹೊಸ ಹೊಸ ಪ್ರದೇಶಗಳ ಜನರನ್ನು ಬರುವಂತೆ ಮಾಡಬೇಕು. ದಾಸೋಹಕ್ಕಾಗಿ ಉದಾರವಾಗಿ ದೇಣಿಗೆ ಕೊಡಬೇಕು ಮತ್ತು

ಇತರರಿಗೂ ದೇಣಿಗೆ ಕೊಡಲು ಪ್ರೇರೇಪಿಸಬೇಕು. ದೇಣಿಗೆಯನ್ನು ಸಂಗ್ರಹಿಸಲು ಪ್ರಯತ್ನಿಸಬೇಕು. ಸಮಯದ ಅನುಕೂಲತೆ ಇದ್ದವರು ಮೊದಲೇ ಬಂದು ಸ್ವಯಂ ಸೇವಕರಾಗಿ ಸೇವೆ ಮಾಡಬೇಕು. ಕಲ್ಯಾಣ ಪರ್ವದ ಸಮಯದಲ್ಲಿ ಅಡಿಗೆ ಮನೆ, ದಾಸೋಹ ಮಂಟಪಗಳಲ್ಲಿ ನಿಂತು ಸೇವೆ ಮಾಡಬೇಕು. ಕೆಲವು ಮಠಾಧೀಶರು ತಮ್ಮ ಮಠಗಳ ಉತ್ಸವಕ್ಕಾಗಿ ಲಕ್ಷ, ಕೋಟಿಗಟ್ಟಳೆ ಕಾಣಿಕೆ ಸಂಗ್ರಹಿಸಿ ಊಟದ ವ್ಯವಸ್ಥೆ ಅತ್ತಲಿರಲಿ ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಿರುವುದಿಲ್ಲವಂತೆ. ಜನರು ತಮ್ಮ ಬುತ್ತಿ ತಾವೇ ತಂದು, ತಿಂದು ಪೆಂಡಾಲಿನ ವೈಭವ ನೋಡಿ ಹೋಗುವರಂತೆ. ನಮ್ಮ ಕಲ್ಯಾಣ ಪರ್ವ, ಶರಣ ಮೇಳಗಳ ಉದ್ದೇಶ ಘನವಾದುದು. ನಮ್ಮದು ಬಡವರ ಮನೆಯ ಊಟದಂತೆ ಸರಳ, ಆದರೆ ಭಕ್ತಿಪೂರ್ಣವಾಗಿರಬೇಕು. ಊಟಕ್ಕೆ ನೀಡುವವರು, ಮಾಡುವವರು ಎಲ್ಲರಲ್ಲೂ ದಾಸೋಹಂಭಾವ ತುಂಬಿತುಳುಕಬೇಕು. ಮೂರು ದಿವಸಗಳ ಕಾರ್ಯಕ್ರಮದಲ್ಲಿ ಒಂದು ಕ್ಷಣವೂ ವ್ಯರ್ಥವಾಗದಂತೆ ಕಲಿಯುವಿಕೆ ನಡೆಯಬೇಕು. ಶರಣು ಶರಣಾರ್ಥಿ ಎಲ್ಲೆಡೆ ನಲಿದಾಡುತ್ತಿರಬೇಕು. ಮಹಾಮನೆಯ ಆವರಣದಲ್ಲೆಲ್ಲ ಪೂಜೆ, ಧ್ಯಾನ, ಜಪ, ಪ್ರಾರ್ಥನೆ, ದಾಸೋಹ ನಡೆಯಬೇಕು.

108 ಅಡಿ ಬಸವ ಪುತ್ಥಳಿ

ಗುರು ಬಸವಣ್ಣನವರ ಕೊಡುಗೆಗೆ ಕೃತಜ್ಞತಾ ರೂಪವಾಗಿ ನಾವು ಏನು ಕೊಟ್ಟರೂ ಕಡಿಮೆಯೆ. ಇಷ್ಟರೊಳಗೆ ಒಂದು ಬೃಹತ್ ಸ್ಮಾರಕ ಆಗಲೇ ಬೇಕಿತ್ತು. ಈಗಲಾದರೂ ಆಗಬೇಕು ಎಂದು ಈ ಕಾರ್ಯವನ್ನು ಕೈಗೆ ಎತ್ತಿಕೊಂಡಾಗಿದೆ. ಮೊದಲ ಹಂತ - ಕೆಳಗಿನ ಪೀಠ; ಎರಡು ಅಂತಸ್ತಿನ 24 ಅಡಿ ಎತ್ತರದ ಪೀಠದ ಕೆಲಸ ಆಗಿದೆ. ಎರಡನೆ ಹಂತ; 108 ಅಡಿಯ ಮೂರ್ತಿಯ ಬೆನ್ನುಹುರಿ (Shaft) ಈ ಕೆಲಸವೂ ಪೂರೈಸಿದೆ. ಹಿಂದಿನ ದಿನಗಳಲ್ಲಿ ಶಿಲ್ಪಿಗಳು ನೇರವಾಗಿ ಮುಖವನ್ನು ಬೃಹತ್ ಮೂರ್ತಿಯಲ್ಲೇ ಮಾಡಿಬಿಡುತ್ತಿದ್ದರಂತೆ. ತುಂಬ ಎತ್ತರದಲ್ಲಿ ಮಾಡುವಾಗ ಹೇಗೆ ಬರಬಹುದೆಂಬ ಅಂದಾಜು ಸಿಗದೆ ನಂತರ ಹೆಚ್ಚು ಕಡಿಮೆಯಾಗುವ ಸಾಧ್ಯತೆ ಇದ್ದುದರಿಂದ, ಈಗ ಮುಖದ ಮಾಡೆಲ್ ಮಾಡಿ ಪ್ರತ್ಯೇಕವಾಗಿ ಅಚ್ಚು ತಯಾರಿಸಿಕೊಳ್ಳುತ್ತಾರೆ. ಅದರಂತೆ ನಮ್ಮಲ್ಲೂ 36 ಅಡಿ ಎತ್ತರದ ಮುಖದ ಮಾದರಿ ಸಿದ್ಧವಾಗಿದೆ. ಇನ್ನು ಮೇಲಿನಿಂದ ಆಕಾರವನ್ನು ಕೊಡುತ್ತಾ ಬರುವರು. ಆದ್ದರಿಂದ ಶೇಕಡಾ 50 ರಷ್ಟು ಕೆಲಸವಾಗಿದೆ ಎಂದು ಅಂದಾಜಿಸಬಹುದು. ಈಗಾಗಲೇ ಒಂದೂವರೆ ಕೋಟಿಗೂ ಮಿಗಿಲು ಹಣವು ಖರ್ಚಾಗಿದೆ. ಮೂರ್ತಿಯ ಜೊತೆಗೆ ಬಸವ ಧ್ಯಾನ ಮಂಟಪ ಎಂಬ ಗವಿ, ಅಕ್ಕನ ಹೆಸರಿನ ಗವಿ, ಜಲಾಗಾರ ಇತ್ಯಾದಿಗಳೂ ಆಗಿವೆ. ಇನ್ನೂ ಒಂದೂವರೆ ಕೋಟಿಗೂ ಮಿಗಿಲಾಗಿ ಹಣ ಬೇಕಾಗುತ್ತದೆ. ಒಮ್ಮೆಗೇ ನೆನೆಸಿಕೊಂಡರೆ ಭಯವಾಗುತ್ತದೆ. ಗುರು ಬಸವಣ್ಣನವರ ಕೃಪೆಯಿಂದ ಕೆಲಸವು ಮಾತ್ರ ನಿರಂತರವಾಗಿ ಸಾಗುತ್ತಿದೆ. ಕಲ್ಯಾಣ ಪರ್ವದ ನಂತರ (ಕಾರ್ಯಕ್ರಮದ ಸಲುವಾಗಿ ಸ್ಥಗಿತಗೊಳಿಸಿರುವ) ಕೆಲಸವು ತ್ವರಿತಗತಿಯಲ್ಲಿ ನಡೆಯಬೇಕಾಗುವುದು. ಆದ್ದರಿಂದ ಶರಣ ಬಂಧುಗಳು ಉದಾರವಾಗಿ, ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಲು ಮುಂದೆ ಬರಬೇಕು. ಧರ್ಮಗುರುವಿಗೆ ಸಲ್ಲಿಸುವ ಕೃತಜ್ಞತಾ ಸಮರ್ಪಣೆಯೇ ದೇಣಿಗೆ.

ಈಗಾಗಲೇ ಒಂದು ವಿಶಿಷ್ಟ ಮೊತ್ತ ಕೊಟ್ಟವರು, ಇನ್ನೂ ಹೆಚ್ಚು ಕೊಡಲು ಮನಸ್ಸು ಮಾಡಬೇಕು. ಈವರೆಗೂ ಕೊಡದೆ ಇರುವವರು ಕೊಡಲು ನಿಶ್ಚಯಿಸಬೇಕು. ತಮ್ಮ ಬಂಧು, ಮಿತ್ರರು, ಪರಿಚಿತರಿಗೆ ಸ್ಮಾರಕದ ಮಹತ್ವ ತಿಳಿಸಿ, ಕೊಡಲು ಪ್ರೇರಣೆ ನೀಡಬೇಕು. ದೇಣಿಗೆಯನ್ನು ಹಣದ ರೂಪದಲ್ಲಲ್ಲದೆ ಬಂಗಾರದ ರೂಪದಲ್ಲಿಯೂ ಕೊಡಬಹುದು. ಶ್ರೀಮಂತರ ಮನೆಯಲ್ಲಿ ಬಂಗಾರವು ನಿಷ್ಪ್ರಯೋಜಕವಾಗಿ, ಜಡವಾಗಿ ಬಿದ್ದಿರುತ್ತದೆ. ಅಂಥದನ್ನು ಧರ್ಮಗುರುವಿನ ಸ್ಮಾರಕಕ್ಕೆ ಕೊಟ್ಟು ವಸ್ತುವನ್ನು ಸಾರ್ಥಕಗೊಳಿಸಬಹುದು. ಬಂಗಾರದ ವಸ್ತುಗಳನ್ನು ಮಾರಿ ಅವರ ಹೆಸರಿನಲ್ಲಿ ದೇಣಿಗೆಯಾಗಿ ಹಣವನ್ನು ತೆಗೆದುಕೊಳ್ಳಲಾಗುವುದು. ನಗದು, ಚೆಕ್ಕು, ಡಿ.ಡಿ, ಬಂಗಾರ ಯಾವ ರೂಪದಲ್ಲಾದರೂ ದೇಣಿಗೆ ಕೊಡಬಹುದು. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗೆ 80 ಜಿ, ಆದಾಯ ತೆರಿಗೆ ವಿನಾಯಿತಿ ಇದೆ. ದಾನಿಗಳು ಈ ಸೌಲಭ್ಯದ ಸದುಪಯೋಗ ಮಾಡಿಕೊಳ್ಳಬೇಕೆಂದು ಕೋರುತ್ತೇವೆ. ಹಣವು ಸರಿಯಾಗಿ ಒದಗಿದರೆ ಮೂರ್ತಿಯ ಕೆಲಸ ಪೂರ್ತಿಯಾಗಲು 10 -11 ತಿಂಗಳು ಬೇಕೆಂದು ಶಿಲ್ಪಿಗಳು ಹೇಳಿದ್ದಾರೆ. ಸರಿಯಾಗಿ ಕೆಲಸ ಸಾಗಿದರೆ ಮುಂದಿನ ಕಲ್ಯಾಣಪರ್ವಕ್ಕೆ ಬಸವ ಪುತ್ಥಳಿಯು ಸಿದ್ಧವಾಗುವುದು. ಆದ್ದರಿಂದ ಶರಣ ಬಂಧುಗಳು ಸಹಕರಿಸಬೇಕೆಂದು ಕೋರುತ್ತೇವೆ.

- ಮಾತಾಜಿ

ಚಿಂತನೆಗೆ ಕರೆ

- ಮಾತಾಜಿ

ಈಗಾಗಲೇ ನಾನು ಇಷ್ಟಲಿಂಗಾರ್ಚನೆಯ ಪದ್ಯಗಳನ್ನು ಬರೆದು ಪ್ರಕಟಿಸಿದ್ದು ಬಹಳಷ್ಟು ಶರಣರು ಕಲಿತು ಪೂಜೆಯಲ್ಲಿ ಬಳಸುತ್ತಿರುವರು. ಇವುಗಳಲ್ಲಿ ಇನ್ನು ಕೆಲವು ವಿಚಾರಗಳು ಬಿಟ್ಟು ಹೋಗಿದ್ದು ಅವು ಬೇಕೆಂದು ನನಗೆ ಅನ್ನಿಸುತ್ತಿತ್ತು. ಮತ್ತು ಕೆಲವು ಶರಣರು ಕೂಡ ಅಂಥವುಗಳ ರಚನೆಗೆ ಬೇಡಿಕೆ ಸಲ್ಲಿಸಿದರು. ಈ ಬಗ್ಗೆ ಚಿಂತಿಸಿ ಕೆಲವನ್ನು ಬರೆದಿರುವೆ, ಓದಿರಿ, ಅಭಿಪ್ರಾಯ ತಿಳಿಸಿರಿ.

1. ಪೂಜೆಗೆ ಬಂದು ಕುಳಿತುಕೊಳ್ಳುವಾಗ ಆಸನ ಸ್ವೀಕಾರ.

ಆಸನದ ಮೇಲೆ ಷಟ್‌ಕೋನ ಪ್ರಣವವನ್ನು ಬರೆಯುತ್ತ ಹೇಳುವ ಪದ್ಯ.

ಲಿಂಗಾಂಗ ಯೋಗವದು ಎನಗೆ ಸಿದ್ಧಿಸಲಿ
ಲಿಂಗದೇವನ ಒಲುಮೆ ತಾ ಹರಿದು ಬರಲಿ
ಷಟ್‌ಕೋನ ಪ್ರಣವವ ಆಸನದಿ ಬರೆದು
ಕುಳಿತುಕೊಳ್ಳುವೆ ಗುರು ಬಸವನ ನೆನೆದು ॥

2. ದೀಪವನ್ನು ಹಚ್ಚುವಾಗ.

ಸಾಂಪ್ರದಾಯಿಕವಾಗಿ ಪೌರಾಣಿಕ ಕಲ್ಪನೆ ಇದೆ. ಅದಕ್ಕಾಗಿ ಅದರ ಬದಲಿಗೆ ಶರಣರು ಬೇಡಿಕೆ ಇಟ್ಟಿದ್ದಾರೆ.

ಬ್ರಹ್ಮಾಂಡದೊಳಗಣ ಕತ್ತಲೆಯು ಹರಿವಂತೆ
ಪಿಂಡಾಂಡದೊಳಗಣ ಮರವೆ ತಾ ಹರಿಯಲಿ
ಅರಿವಿನ ಸಂಕೇತವಾಗಿ ತಾನುರಿಯಲಿ
ಎಂದೆನುತ ದೀಪವನು ನಾನು ಹೊತ್ತಿಸುವೆ ॥

3. ಯೋಗಿರಾಜ ಶಿವನ ನೆನಹು

ಭಾರತೀಯ ಪರಂಪರೆಯ ಮೂಲ ಪುರುಷ, ಓಂಕಾರ ವಿಭೂತಿ ರುದ್ರಾಕ್ಷಿಗಳ ದಾತ ಶಿವನನ್ನು ಹರನು ಮೂಲಿಗನಾಗಿ, ಪುರಾತನರೊಳಗಾಗಿ ಎಂದು ಧರ್ಮಪಿತ ಬಸವಣ್ಣನವರು ಕೊಂಡಾಡಿ, ಸ್ಮರಿಸುವುದರಿಂದ ಯೋಗಿರಾಜ ಶಿವನ ಸ್ಮರಣೆ ಅಗತ್ಯವೇನೋ ಎನ್ನಿಸಿ ಬರೆಯಲಾಗಿದೆ. ಇದು ಈ ಮಹತ್ ಸೃಷ್ಟಿಯನು ಮತ್ತು ಧರ್ಮಪಿತ ಬಸವ ಗುರು ಇವೆರಡರ ಮಧ್ಯೆ ಬರುವುದು ಸೂಕ್ತವೇನೋ ಎನ್ನಿಸಿದೆ.

ಈ ಜಗದ ಪ್ರಪ್ರಥಮ ಯೋಗಿರಾಜನೆನಿಸಿ
ಮಡದಿ ಪಾರ್ವತಿಗೆ ಯೋಗ ವಿದ್ಯೆಯ ಕಲಿಸಿ
ಓಂಕಾರ ವಿಭೂತಿ ರುದ್ರಾಕ್ಷಿ ಹೊಂದಿದ
ಪಥವ ನೀಡಿದ ಶಿವಗೆ ಶರಣು ಸಲ್ಲಿಸುವೆ ॥

4. ಅಂಗೈಯಲ್ಲಿ ಇಷ್ಟಲಿಂಗ ಇರಿಸುವುದು

ಮಜ್ಜನಕ್ಕೆರೆದು, ಒರೆಸಿ, ಪಂಚಕೋನ ಪ್ರಣವ ಬರೆದ ನಂತರ ಅಂಗೈಯಲ್ಲಿ ಇಷ್ಟಲಿಂಗ ಇಡುವಾಗ ಹೇಳುವುದು.

ಜಗದಾದಿ ಕರ್ತನ ಪೂಜೆ ಗೈಯುವ ಪುಣ್ಯ
ಒದಗಿ ಬಂದಿಹುದೆಂಬ ಸಂಭ್ರಮದಲ್ಲಿ
ಗೋಮುಖದ ಕುರುಹನು ಹೆಬ್ಬೆರಳ ಮುಖ ಮಾಡಿ
ಪಂಚಕೋನದ ಮೇಲೆ ಇಷ್ಟಲಿಂಗವನಿಡುವೆ.

ವಚನ ಕಿರಣ:

- ಮಾತಾಜಿ

ಶರಣನ ಲಕ್ಷಣ ತ್ರಿವಿಧ ದಾಸೋಹ

ಆಡಿದಡೇನು, ಹಾಡಿದಡೇನು ಓದಿದಡೇನು,
ತ್ರಿವಿಧ ದಾಸೋಹವಿಲ್ಲದನಕ್ಕ
ಆಡದೆ ನವಿಲು ? ಹಾಡದೆ ತಂತಿ ? ಓದದೆ ಗಿಳಿ ?
ಭಕ್ತಿಯಿಲ್ಲದವರನೊಲ್ಲ ಲಿಂಗದೇವ. - ಬ.ವ.ದೀ.209

ಆಡುವುದು ಎಂದರೆ ಭಕ್ತಿಗೀತೆಗಳನ್ನು ಹಾಡುತ್ತ ಭಜನೆ ಮಾಡುವುದು ಮುಖ್ಯವಾಗಿ ನರ್ತನ ಮಾಡುವುದು, ವಚನದ ಭಾವವನ್ನು ಅಭಿನಯದ ಮೂಲಕ ತೋರಿಸುವುದು. ನಾಟಕ ಆಡ್ತಾರೆ ಅನ್ನುತ್ತೇವಲ್ಲವೆ? ಹಾಡುವುದು ಎಂದರೆ ತಾಳಲಯ ಬದ್ಧವಾಗಿ ಸುಶ್ರಾವ್ಯವಾಗಿ ಗಾಯನ ಮಾಡುವುದು. ಓದುವುದು ಎಂದರೆ ಶಾಸ್ತ್ರೀಯವಾಗಿ ವ್ಯಾಕರಣ ದೋಷವಿಲ್ಲದೆ ಪಠಣ ಮಾಡುವುದು. ಓರ್ವ ಭಕ್ತನಿದ್ದಾನೆ ಎಂದುಕೊಳ್ಳೋಣ. ಅವನಿಗೆ ಅಭಿನಯವೂ ಬರದು, ಭಾವಾಭಿವ್ಯಕ್ತಿಯೂ ಬರದು. ಕಂಠವೂ ಮಧುರವಾಗಿಲ್ಲ ಗಾಯನ ಕಲೆ ಮೊದಲೇ ಇಲ್ಲ. ಇನ್ನು ಅನಕ್ಷರಸ್ಥ. ಓದಲೂ ಬರದು. ಆದರೂ ಅವನ ಪರವಶತೆ ನೋಡಿ ಅವನನ್ನು ಭಕ್ತನೆಂದು ಗುರುತಿಸುತ್ತೇವೆ. ಭಕ್ತಿಯ ಅಂಶವಿಲ್ಲದಿದ್ದರೂ ವೃತ್ತಿಪರ ತರಬೇತಿಯಿಂದ ಅಭಿನಯಿಸಲು, ಹಾಡಲು, ಓದಲು ಕಲಿತಿರುತ್ತಾರೆ. ಅಂಥವರನ್ನು ಭಕ್ತರು ಎನ್ನುವುದಿಲ್ಲ.

ಭಕ್ತಿಯ ಮುಖ್ಯ ಅಂಶ ಸಮರ್ಪಣೆ. ಗುರು ಲಿಂಗ ಜಂಗಮಕ್ಕೆ ತನು ಮನ ಧನ ಎಂಬ ತ್ರಿವಿಧ ಸಂಪತ್ತನ್ನು ಅರ್ಪಿಸುವುದು ನಿಜವಾದ ಭಕ್ತಿ. ಅದಿಲ್ಲದಾಗ ಅವು ಯಾಂತ್ರಿಕ ಕ್ರಿಯೆಗಳು - ನವಿಲು ನರ್ತಿಸಿದಂತೆ, ವೀಣೆಯ ತಂತಿ ಮಿಡಿದಂತೆ, ಗಿಳಿಯು ಶಬ್ದಗಳನ್ನು ಪಠಿಸಿದಂತೆ. ಗಿಳಿಗೆ ಶಬ್ದದ ಅಂತರಾರ್ಥ ಬೇಕಾಗಿಲ್ಲ, ಯಾಂತ್ರಿಕ ಉಚ್ಚಾರವಷ್ಟೆ ಅಲ್ಲಿರುವುದು.

ಅದು ಸ್ವಾತಂತ್ರ್ಯಕ್ಕಾಗಿ ಚಳುವಳಿ ನಡೆಯುತ್ತಿದ್ದ ಕಾಲ; ಒಮ್ಮೆ ಓರ್ವ ಹೋರಾಟಗಾರರು ಇನ್ನೊಬ್ಬ ಚಳುವಳಿಗಾರರ ಮನೆಗೆ ಬಂದರು. ಅವರದು ದೊಡ್ಡ ಮನೆ, ದೊಡ್ಡ ಮನಸ್ಸು. ಹೀಗಾಗಿ ಬಹಳಷ್ಟು ಜನಕ್ಕೆ ಆಶ್ರಯ ಸಿಗುತ್ತಿತ್ತು. ಹಲವಾರು ಜನ ಚಳುವಳಿಗಾರರು ಇವರ ಮನೆಯಲ್ಲೇ ಸೇರಿ ಚರ್ಚಿಸುತ್ತಿದ್ದರು. ಚಳುವಳಿಯ ರೂಪುರೇಷೆ ಕುರಿತು ಚಿಂತಿಸುತ್ತಿದ್ದರು. ಆ ದಿನ ಬಂದ ಆಗಂತುಕರು ಕಾಯುತ್ತ ಕುಳಿತಿದ್ದರು. ಸ್ವಾತಂತ್ರ್ಯ ಬೇಕು, ಸ್ವಾತಂತ್ರ್ಯ ಎಂಬ ಧ್ವನಿ ಕೇಳಿ ಅತ್ತ ನೋಡಿದರು. ಅಲ್ಲೊಂದು ಗಿಳಿಯ ಪಂಜರ; ಅದರೊಳಗೆ ಗಿಳಿ ಸ್ವಾತ್ರಂತ್ರ್ಯ ಬೇಕು ಎನ್ನುತ್ತಿತ್ತು. ಆಗಂತುಕರಿಗೆ ಕೆಡುಕೆನಿಸಿತು. ಇಷ್ಟೆಲ್ಲ ತಿಳಿದವರು. ಈ ಗಿಳಿಯನ್ನು ಏಕೆ ಕೂಡಿಹಾಕಿದ್ದಾರೊ? ಅದಕ್ಕೂ ಸ್ವಾತಂತ್ರ್ಯ ಬೇಕು. ನನ್ನನ್ನು ದೂಷಿಸಿದರೂ ಚಿಂತೆಯಲ್ಲ ಎಂದು ಪಂಜರದ ಬಾಗಿಲು ತೆಗೆದರು. ಗಿಳಿ ಹಾರಿ ಹೊರಗೆ ಬಂದು ಬೇರೆಡೆ ಹೋಗಿ ಕುಳಿತಿತು. ಅದನ್ನು ಮುಕ್ತಗೊಳಿಸಿದ ಬಗ್ಗೆ ಇವರಿಗೆ ಸಂತೋಷವೆನಿಸಿತು. ಆದರೆ ಸ್ವಲ್ಪ ಹೊತ್ತಿನಲ್ಲೇ ಆ ಗಿಳಿಯು ಹಾರಿ ಬಂದು ಪಂಜರದಲ್ಲಿ ಕುಳಿತು ಅಲ್ಲಿಡಲಾಗಿದ್ದ ಹಣ್ಣನ್ನು ಕುಕ್ಕಿ ತಿನ್ನುತ್ತ ಸ್ವಾತಂತ್ರ್ಯ ಬೇಕು ಎಂದು ಪಠಣವನ್ನು ಪುನರಾವರ್ತನೆ ಮಾಡತೊಡಗಿತು. ಆಗ ಇವರಿಗೆ ಮನವರಿಕೆಯಾಯಿತು, ಈ ಗಿಳಿಗೆ ಸ್ವಾತಂತ್ರ್ಯದ ಆನಂದಾನುಭವವಿಲ್ಲ. ಯಾಂತ್ರಿಕವಾಗಿ ಸ್ವಾತಂತ್ರ್ಯ ಬೇಕು ಎಂದು ಅನ್ನುತ್ತಿದೆ. ಇಲ್ಲಿ ಚರ್ಚಿಸುವ ಚಳುವಳಿಗಾರರು ಈ ಬಗ್ಗೆಯೇ ಮಾತನಾಡುವುದನ್ನು ಅದು ಬಾಯಿಪಾಠ ಮಾಡಿ ಕೊಂಡಿರುವಂತೆ ಕಾಣುತ್ತಿದೆ.

ಹಾಗೆಯೇ ಬಹುಪಾಲು ನರ್ತಕರು, ಗಾಯಕರು, ಪಾಠಕರು ಅರ್ಥಾತ್ ಸಾಹಿತಿಗಳು ಸಹ. ಭಕ್ತ ಅಥವಾ ಅನುಭಾವಿಗೆ ವಚನದ ಒಂದೊಂದು ಪದವೂ ಅಷ್ಟೇ ಮುಖ್ಯ. ಅವನು ಅದನ್ನು ಅನುಭವಿಸಿದರೇ ಅವನಿಗೆ ಆನಂದ. ಆದರೆ ನರ್ತಕನು ಅಭಿನಯದಲ್ಲಿ ಆನಂದಿಸುವನಾದರೂ ಆ ವೇದಿಕೆಯಿಂದ ಇಳಿಯುತ್ತಲೇ ಅವನ ಜೀವನದ ವಿಧಾನವೇ ಬೇರೆಯಾಗುತ್ತದೆ. ಗಾಯಕನೂ ಅಷ್ಟೆ. ತಲ್ಲೀನನಾಗಿ ವಚನಗಳನ್ನು ಅಥವಾ ಭಕ್ತಿ ಗೀತೆಗಳನ್ನು ಹಾಡುವನಾದರೂ ಅದರಂತೆ ಬದುಕುವುದಿಲ್ಲ. ವಿದ್ವಾಂಸರು ಗಿಳಿಯೋದಿನಂತೆ ವಚನಗಳಿಗೆ ವ್ಯಾಖ್ಯಾನ ಮಾಡುವರಾದರೂ ಅದರ ಅಂತಃ ಸತ್ವವನ್ನು ಅನುಭವಿಸರು. ಉದಾಃ ಅನೇಕ ಸಾಹಿತಿಗಳು ಅಷ್ಟಾವರಣದ ಬಗ್ಗೆ ಲೇಖನ ಬರೆಯುವರು. ಭಾಷಣ ಮಾಡುವರು ತಾವು ಸ್ವತಃ ಇಷ್ಟಲಿಂಗವನ್ನು ಕಟ್ಟಿರುವುದಿಲ್ಲ ವಿಭೂತಿ-ರುದ್ರಾಕ್ಷಿಗಳನ್ನು ಧರಿಸಿರುವುದಿಲ್ಲ. ಇನ್ನು ಗುರು ಲಿಂಗ ಜಂಗಮ ಪ್ರೇಮ ಅಥವಾ ದಾಸೋಹವಂತೂ

ದೂರವೇ ಉಳಿಯಿತು. ವಿಶ್ವವಿದ್ಯಾಲಯಗಳ ಅಧ್ಯಾಪಕರುಗಳು ಇಡೀ ಜೀವನದಲ್ಲಿ ಹತ್ತು ರೂಪಾಯಿಗಳನ್ನಾದರೂ ಧರ್ಮಕ್ಕಾಗಿ ಸಲ್ಲಿಸಿರುವರೇ ಎಂಬುದೇ ಸಂದೇಹಾಸ್ಪದ.

ಶರಣನು ಹಾಗಲ್ಲ. ಅವನು ಅಭಿನಯ , ಗಾಯನ ಚತುರನಲ್ಲ. ಆಚರಣೆಯಲ್ಲಿ ಆಸಕ್ತನು. ತನುವನ್ನು ಕಾಯಕ ಮತ್ತು ಸೇವೆಯಲ್ಲಿ, ಮನವನ್ನು ಇಷ್ಟಲಿಂಗ ಪೂಜೆ ಮತ್ತು ಶರಣರ ಸಂಗದಲ್ಲಿ, ಧನವನ್ನು ದಾಸೋಹದಲ್ಲಿ ಸವೆಸುವನು. ಈ ತ್ರಿವಿಧ ದಾಸೋಹಕ್ಕೆ ಪ್ರೇರಕ ಶಕ್ತಿ ಎಂದರೆ ಭಕ್ತಿ ಮತ್ತು ಅದರ ಮುಖ್ಯ ಅಂಶವಾದ ಸಮರ್ಪಣೆ. ಇವೆರಡೂ ಇಲ್ಲದಾಗ ನರ್ತನವು ನವಿಲಿನ ಕುಣಿತ ಅಥವಾ ದೇಹದ ಕಸರತ್ತು, ಗಾಯನವು ತಂತಿಯ ಮಿಡಿತ, ವ್ಯಾಖ್ಯಾನವು ಗಿಳಿಯೋದಿನಂತೆ ಯಾಂತ್ರಿಕ. ದೇವನು ಅದಕ್ಕೆ ಆಕರ್ಷಿತನಾಗನು ಮತ್ತು ಒಲಿಯನು.

ದೈವೀ ಲೀಲೆ

- ಮಾತಾಜಿ

ಕೆಲವು ಘಟನೆಗಳು ಅತ್ಯಂತ ಆಕಸ್ಮಿಕ ಎಂದು ಲೋಕದ ದೃಷ್ಟಿಯಿಂದ ಅನ್ನಿಸಬಹುದು. ಆದರೆ ಅವುಗಳ ಹಿಂದೆ ದೈವೀಶಕ್ತಿಯ ಕೈವಾಡವು, ಲೀಲೆಯು ಇರುತ್ತದೆಂದು ಸೂಕ್ಷ್ಮವಾಗಿ ಆಲೋಚಿಸಿದರೆ ಮನವರಿಕೆಯಾಗದೆ ಇರದು.

ಒಂದು ದಿವಸ (ಪುಸ್ತಕದಲ್ಲಿ ಕಾಣಿಸಿರುವಂತೆ ದಿ.13-6-2008) ಕೂಡಲ ಸಂಗಮದ ಗುರು ಬಸವಣ್ಣನವರ ಐಕ್ಯ ಮಂಟಪದಲ್ಲಿ ಶರಣ ಸಚ್ಚಿದಾನಂದ ಅವರು ಹೋಗಿ ಒಂದು ಕಡೆಯಲ್ಲಿ ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಅವರು ಸಂಕಲ್ಪ ಮಾಡಿ, ಒಂದು ವಾರ ಕಾಲ ನಮ್ಮ ಮಹಾಮನೆ -ಯಲ್ಲಿದ್ದು ಕೊಂಡು ದಿನಾಲೂ ಐಕ್ಯಮಂಟಪಕ್ಕೆ ಹೋಗಿ ಧ್ಯಾನ ಮಾಡುತ್ತಿದ್ದರು. ಅಂದು ತಮ್ಮ ಪಾಡಿಗೆ ತಾವು ಕುಳಿತಿರುವಾಗ ಓರ್ವ ಮಹಿಳೆ ಬಂದು ಮುಗ್ಧ ಭಾವದಿಂದ, "ಇಲ್ಲಿ ಯಾರೋ ಬಂದು ಈ ಪುಸ್ತಕವನ್ನು ಇಟ್ಟು ಮರೆತು ಹೋಗಿದ್ದಾರೆ ನೋಡ್ರಿ." ಎಂದು ಕೊಟ್ಟಿದ್ದಾಳೆ. ಗುರು ಬಸವಣ್ಣನವರ ಸಮಾಧಿ ಲಿಂಗದ ಮುಂದೆ ಅದನ್ನು ಇಡಲಾಗಿದೆ. ಮೌನದಲ್ಲಿದ್ದ ಸಚ್ಚಿದಾನಂದ ಅವರು ಅದನ್ನು ಇಟ್ಟುಕೊಂಡು, ಅನುಷ್ಠಾನ ಮುಗಿದ ಮೇಲೆ ಕೂಡಲ ಸಂಗಮದಿಂದ ಬೆಂಗಳೂರಿಗೆ ಬಂದು ಅದನ್ನು ನನಗೆ ಒಪ್ಪಿಸಿದರು.

ಅದು ಬೀದರಿನ ಅಕ್ಕ ಅನ್ನಪೂರ್ಣ ಅವರು ಸಂಪಾದಿಸಿ ಮುದ್ರಿಸಿದ ಧರ್ಮಗುರು ಬಸವಣ್ಣನವರ ವಚನ ಗ್ರಂಥ. ಅದರಲ್ಲಿ ಅವರು ಧರ್ಮಗುರು ಬಸವಣ್ಣನವರ ಶ್ರೀ ಚರಣಗಳಲ್ಲಿ ಭಕ್ತಿಪೂರ್ವಕ ಸಮರ್ಪಣೆ ಎಂದು ಬರೆದು 13-06-2008 ಎಂಬ ದಿನಾಂಕ ಹಾಕಿದ್ದಾರೆ. ಐಕ್ಯ ಮಂಟಪಕ್ಕೆ ಯಾರು ಬಂದು ಅರ್ಪಿಸಿದರೋ ತಿಳಿಯದು. ಆದರೆ ಧರ್ಮಗುರುವಿಗೆ ಅರ್ಪಿಸಿದ್ದು ಓರ್ವ ಹಳ್ಳಿಯ ಹೆಣ್ಣು ಮಗಳ ಮೂಲಕ ಸಚ್ಚಿದಾನಂದರ ಕೈ ಸೇರಿ, ಅವರ ಮೂಲಕ ಬೆಂಗಳೂರಲ್ಲಿದ್ದ ನನ್ನ ಕೈಗೆ ತಲ್ಪಬೇಕಾದರೆ ಇದಕ್ಕೆ ಆಕಸ್ಮಿಕ ಎನ್ನೋಣವೋ ಅಥವಾ ಧರ್ಮಗುರುವಿನ ಬಯಕೆ ಎನ್ನೋಣವೋ?

ಮಹಾಮನೆಯ ವೈಶಿಷ್ಟ್ಯ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ ॥ ಪ ॥
ಮಹಾಮನೆಯ ಭಕ್ತಿಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ. ಪ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ॥ 1 ॥

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ-ಮಧುವಯ್ಯ-ಮೋಳಿಗೆಯ ಮಾರಯ್ಯ ಈ
ಶರಣರೆಮ್ಮಯ ಬಂಧು ಬಳಗ ॥ 2 ॥

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥ 3 ॥

ಕಲ್ಯಾಣ ಮಹಾಮನೆಯು ಮರುಹುಟ್ಟು ಪಡೆದಿಹುದು
ಕೂಡಲ ಸಂಗಮದಿ ತಲೆ ಎತ್ತಿ ನಿಂತಿಹುದು
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವ ಪ್ರೇಮ ಸಾರುತಿಹುದು ॥ 4 ॥

ಹುಟ್ಟಿನಿಂದಲಿ ನೀವು ಏನೇ ಇರಬಹುದು
ಸದ್ಭಾವ ಗುಣದಲಿ ಹೇಗೇ ಇರಬಹುದು
ಶರಣ ಮೇಳಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥ 5 ॥

ಕೂಡಲ ಸಂಗಮ ಧರ್ಮ ಕ್ಷೇತ್ರದಲ್ಲಿ
ನಡೆಯುತಿಹ ಮೇಳವು ತೌರಿನ ಹಬ್ಬ
ಬಸವ ಕಲ್ಯಾಣದಿ ಶರಣರನು ಸೇರಿಸಿ
ಕಲ್ಯಾಣ ಪರ್ವವು ತರುತಿದೆ ಉಬ್ಬ ॥ 6 ॥

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿಯ ಉಣ್ಣಲು ಬನ್ನಿ
ತತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನ ಒಲುಮೆ ಪಡೆಯಲು ಬನ್ನಿ ॥ 7 ॥

7ನೆಯ ಕಲ್ಯಾಣ ಪರ್ವ - ಕಾರ್ಯಕ್ರಮ ವಿವರ

ಶರಣ ಭೂಮಿ ಬಸವ ಕಲ್ಯಾಣದಲ್ಲಿ 2008ರ ಅಕ್ಟೋಬರ್ 12, 13, 14ರಂದು 7ನೆಯ ಕಲ್ಯಾಣ ಪರ್ವವು ಜರುಗಲಿದೆ.

ಕಾರ್ಯಕ್ರಮ ವಿವರ ಹೀಗಿದೆ :

ದಿ. 12-10-2008, ದೇವ (ಭಾನು)ವಾರ

ಉದ್ಘಾಟನೆ	- ಬೆಳಿಗ್ಗೆ 10-30,
ಸಾಮೂಹಿಕ ಪ್ರಾರ್ಥನೆ	
ರಾಷ್ಟ್ರೀಯ ಬಸವ ದಳದ ಸಮಾವೇಶ	- ಮಧ್ಯಾಹ್ನ 3-30ರಿಂದ 6-00
ಚಿಂತನ ಗೋಷ್ಠಿ	- ಸಂಜೆ 6-30ರಿಂದ
ಸಾಂಸ್ಕೃತಿಕ ಕಾರ್ಯಕ್ರಮ	- ರಾತ್ರಿ 9 ಗಂಟೆ

ದಿ. 13-10-2008, ಶಿವ (ಸೋಮ)ವಾರ

ಸಾಮೂಹಿಕ ಇಷ್ಟಲಿಂಗ ಪೂಜೆ	- ಬೆಳಿಗ್ಗೆ 7-30
ಶರಣ ವಂದನೆ	- ಬೆಳಿಗ್ಗೆ 10-30
ಮಹಾರಾಷ್ಟ್ರದವರಿಗಾಗಿ ಮರಾಠಿಯಲ್ಲಿ ಉಪನ್ಯಾಸಗಳು	- ಮಧ್ಯಾಹ್ನ 3-30
ಶೂನ್ಯ ಪೀಠದ ವಾರ್ಷಿಕೋತ್ಸವ	- ಸಂಜೆ 6-30
ಸಾಂಸ್ಕೃತಿಕ ಕಾರ್ಯಕ್ರಮ	- ರಾತ್ರಿ 9 ಗಂಟೆ.

ದಿ. 14-10-2008, ಬಸವ (ಮಂಗಳ)ವಾರ

ಸಾಮೂಹಿಕ ಇಷ್ಟಲಿಂಗ ಪೂಜೆ	- ಬೆಳಿಗ್ಗೆ 7-30
ಬಸವ ಭಾವಚಿತ್ರ ಮೆರವಣಿಗೆ	- ಬೆಳಿಗ್ಗೆ 9-00
ಸಮಾರೋಪ ಸಮಾರಂಭ	- ಬೆಳಿಗ್ಗೆ 11-30



ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಏಳನೆಯ ಕಲ್ಯಾಣ ಪರ್ವ

2008ರ ಅಕ್ಟೋಬರ್ 12, 13 ಮತ್ತು 14 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 21ನೆಯ ಶರಣ ಮೇಳವು ಇದೇ 2008ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

**''ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು''**

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. ''ಕಾಯಕವೇ ಕೈಲಾಸ '' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ ''ಕಲ್ಯಾಣ ಪರ್ವ''ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2008ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 7ನೆಯ ಕಲ್ಯಾಣ ಪರ್ವವನ್ನು 2008 ರ ಅಕ್ಟೋಬರ್ 12, 13 ಮತ್ತು 14 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು-ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. **"ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು"** ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 11ರ ರಾತ್ರಿಯಿಂದ ಅಕ್ಟೋಬರ್ 15 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ : 300 ರೂ
6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ
ಬಸವ ಮಹಾಮನೆ, ಬಸವ ಕಲ್ಯಾಣ - 585327, ಜಿಲ್ಲೆ - ಬೀದರ್
☎ :08482 - 251921/252856

ಬಸವ ವಚನಾಮೃತ

42. ದೇವನಲ್ಲಿ ಶರಣಾಗತಿ

ಅಂಗದ ನೋಟವು ಸಿಂಗದ ಗಾತ್ರವು
ಹಿಂಗದು ಮನದಲ್ಲಿ ನಾನಾ ವಿಕಾರವು.
ಬಂದೆನೆಂದರಿಯಲಿಕ್ಕಿಲ್ಲಾಗಿ ಸಂದೇಹ ಬಿಡದು;
ಮುಂದುಗಾಣದು ಲೋಕ.
ಬೆಂದ ಮಾಯಕ್ಕಂಜಿ ನಿಮ್ಮ ಮರೆವೊಕ್ಕೆ
ಲಿಂಗದೇವಾ. - ಬ.ವ.ದೀ- 40

ಆಕಾರ ನೋಡಿದರೆ ಭವ್ಯ; ಮುಖ ಬಹಳ ಮುಗ್ಧ, ಗಂಭೀರ ಸಿಂಹದಂತೆ ಕಾಣುವ ನಿಲುವು; ಅಂತರಂಗ ನೋಡಿದರೆ ದೌರ್ಬಲ್ಯಗಳ ಆಗರ, ನಾನಾ ವಿಕಾರಗಳ ನೆಲೆ.

ಈ ಜೀವಾತ್ಮವು ಈ ಜನ್ಮದವರೆಗೆ ಹತ್ತು ಹಲವು ಜನ್ಮಗಳಲ್ಲಿ ಬಂದು ನಾನಾ ಸಂಕಷ್ಟಗಳನ್ನು ಅನುಭವಿಸಿದೆ. ಆದರೆ ಇದನ್ನು ಅರಿಯದೆ ಅಜ್ಞಾನಿಯಾಗಿ ನಾನಾ ಸಂದೇಹಗಳಲ್ಲಿ ತೊಳಲಿ ಬಳಲುತ್ತಿದೆ. ದೇವರು, ಆತ್ಮ, ಅನುಗ್ರಹ ಮುಂತಾದ ಮೌಲ್ಯಗಳಲ್ಲಿ ದೃಢ ನಂಬಿಕೆಯನ್ನೇ ಹೊಂದಿರದು. ಬಹುಪಾಲು ಜನರಿಗೆ ಮುಂದಿನ ದಾರಿಯೇ ಖಚಿತವಾಗಿರದು. ಈ ಎಲ್ಲ ಮಾಯಾ ಜಂಜಡಕ್ಕೆ ಹೆದರಿ ನಾನಂತೂ ಲಿಂಗದೇವರೇ ನಿನ್ನ ಆಶ್ರಯಕ್ಕೆ ಬಂದಿದ್ದೇನೆ.

43. ವಿಕಾರಗಳ ಜಗ್ಗಾಟ

ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ;
ಮತಿಗೆಟ್ಟೆನು ಮನದ ವಿಕಾರದಿಂದ;
ಧೃತಿಗೆಟ್ಟೆನು ಕಾಯವಿಕಾರದಿಂದ;
ಶರಣುವೊಕ್ಕೆನು ಲಿಂಗದೇವಯ್ಯಾ. - ಬ.ವ.ದೀ-41

ಪಂಚಜ್ಞಾನೇಂದ್ರಿಯಗಳೆಂಬ ಸಾಧನಗಳು ಮನದೊಳಕ್ಕೆ ತಂದು ಹಾಕುವ ಧಾತುಗಳಾದ ಶ್ರವಣ, ಸ್ಪರ್ಶ, ನೋಟ, ರಸ, ವಾಸನೆಗಳೆಂಬ ಕೊಳೆಗಳಿಂದ ನಾನು ವಿಚಲಿತನಾಗುತ್ತಿದ್ದೇನೆ. ಹೊರಗಿನಿಂದ ಬರುವ ಈ ಕೊಳೆಗಳು ಮನಸ್ಸಿನ ವಿಕಾರಕ್ಕೆ ಕಾರಣವಾಗುತ್ತವೆ. ಅದರಿಂದ ಬುದ್ಧಿಯು ಮಂಕಾಗುತ್ತದೆ, ವಿಚಾರಶಕ್ತಿಯೇ ಕುಂದಿ ಹೋಗುತ್ತದೆ. ಶರೀರವು ಯಾವಾಗ ವಿಕಾರಗಳಿಗೆ ಈಡಾಗುವುದೋ ಆಗ ಧೈರ್ಯವು ಕುಂದುತ್ತದೆ. ಈ ಎಲ್ಲ ವಿಕಾರಗಳಿಂದ ತಪ್ಪಿಸಿಕೊಳ್ಳಲಿಕ್ಕಾಗಿ ನಾನು ಲಿಂಗದೇವರೇ ನಿನಗೆ ಶರಣಾಗುತ್ತೇನೆ.

44. ದೇವಾ, ಕ್ರೌರ್ಯ ನಿನಗೆ ತರವೆ ?

ಮುನಿದೆಯಾದಡೆ ಒಮ್ಮೆ ಜರಿದಡೆ ಸಾಲದೆ?
ಅಕಟಕಟಾ, ಮದನಂಗೆ ಮಾರುಗೊಡುವರೆ ?
ಹಗೆಗೆ ಮಾರುಗೊಟ್ಟು, ನಿನ್ನವರನೊಪ್ಪಿಸುವರೆ,
ಲಿಂಗದೇವಾ? - ಬ.ವ.ದೀ - 43

ಈ ವಚನದಲ್ಲಿ ಸಾಧಕ ಜೀವಿ ಬಸವಣ್ಣನವರು ಲಿಂಗದೇವನ ಜೊತೆಗೆ ಹುಸಿ ಮುನಿಸಿನ ಆಟವನ್ನು ಆಡುತ್ತಿದ್ದಾರೆ. ದೇವರೇ, ನಿನಗೆ ನನ್ನ ಮೇಲೆ ಕೋಪವು ಉಂಟಾಗಿದ್ದರೆ ನನ್ನನ್ನು ಜರಿ; ದೂಷಿಸು, ಶಿಕ್ಷೆ ಕೊಡು. ಆದರೆ ಕಾಮನೆಂಬುವ ಶತ್ರುವಿನ ಕೈಗೆ ಒಪ್ಪಿಸಬಹುದೆ? ನಂಬಿ, ಶರಣಾದವರನ್ನು ಯಾರೂ ಶತ್ರುವಿನ ಕೈಗೆ ಒಪ್ಪಿಸುವುದಿಲ್ಲ ಎಂಬುದು ಲೌಕಿಕರಲ್ಲಿ ಸಹ ಇರುವ ನೇಮ. ಹೀಗಿದ್ದಾಗ ನೀನು ನಿನ್ನ ಶತ್ರುವಾದ ಕಾಮನ ಕೈಗೆ ನಿನಗೆ ಶರಣುಬಂದಿರುವ ನನ್ನನ್ನು ಒಪ್ಪಿಸಬಹುದೆ? ನೀನು ಕರುಣಾಳು ಅಂದಾಗ ಈ ಕ್ರೌರ್ಯವೇಕೆ ?

45. ಸಂತೈಸಬಾರದೆ ದೇವಾ ?

ಆನು ಒಬ್ಬನು, ಸುಡುವರೈವರು;
ಮೇಲೆ ಕಿಚ್ಚು ಘನ; ನಿಲಲು ಬಾರದು !
ಕಾಡ ಬಸವನ ಹುಲಿ ಕೊಂಡೊಯ್ದಡೆ
ಆರೈಯಲಾಗದೆ, ಲಿಂಗದೇವಾ ? -ಬ.ವ.ದೀ -43

ಒಬ್ಬ ವ್ಯಕ್ತಿಯನ್ನು ಮಧ್ಯೆ ನಿಲ್ಲಿಸಿ ಸುತ್ತಲೂ ಐವರು ಬೆಂಕಿ ಹಚ್ಚಿದ್ದಾರೆ. ಮೇಲೆ ನೋಡಿದರೆ ಉರಿಯುವ ಸೂರ್ಯನ ತಾಪ. ವ್ಯಕ್ತಿಯು ನಿಲ್ಲಲಾರದೆ ಚಟಪಟಿಸುತ್ತಿರುವನು. ಕಾಡಿನಲ್ಲಿ ಇರುವ ಹೋರಿಯೊಂದನ್ನು ಹುಲಿ ಎಳೆದೊಯ್ಯುತ್ತಿರುವಾಗ ಅದರ ಕ್ರೂರ ಮುಷ್ಟಿಯಿಂದ ಬಿಡಿಸಿ, ಅದಕ್ಕೆ ಆರೈಕೆ ಮಾಡಿ ಜೀವವನ್ನು ರಕ್ಷಿಸಲು ಆಗುವುದಿಲ್ಲವೆ? ಅದೇ ರೀತಿ ಅಂತರಾತ್ಮನನ್ನು ಪಂಚಜ್ಞಾನೇಂದ್ರಿಯಗಳ ಆಹಾರವಾದ ತನ್ಮಾತ್ರೆಗಳು ಸುಡುತ್ತಿರುವವು. ಜೊತೆಗೆ ಶರಣಾಗತವಾಗಲು ತಡೆಯುತ್ತಿರುವ ಅಹಂಕಾರ ಎಂಬ ರವಿತಾಪ. ಇಂಥ ಪ್ರಸಂಗದಲ್ಲಿ ಅಂತರಾತ್ಮವು ಹುಲಿಯ ಕೈಗೆ ಸಿಗುವ ಮುಗ್ಧ ಪಶುವಿನಂತಿದೆ ಹೀಗಿದ್ದಾಗ ಲಿಂಗದೇವಾ ಅನಾಥ ರಕ್ಷಕ, ನೀನಾದರೂ ಈ ಪಂಚತಾಪಗಳಿಂದ ಬಿಡಿಸಿ ರಕ್ಷಿಸಬಾರದೆ ?

46. ಪಂಚೈವರ ದೈವೀಕರಣ

ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ-
ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ,
ಅದೇಕೆಂದಡೆ ;
ನಿಮ್ಮತ್ತಲೆನ್ನ ಬರಲೀಯವು.
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ ಭಕ್ತರ ಮಾಡು ಲಿಂಗದೇವಾ. - ಬ.ವ.ದೀ- 44

ಮನುಷ್ಯನ ಅಧ್ಯಾತ್ಮಿಕ ಪ್ರಗತಿಗೆ ಬಹುದೊಡ್ಡ ಅಡ್ಡಿ ಎಂದರೆ ಆಸೆ. ವ್ಯಕ್ತಿಯ ಮನಸ್ಸು ಸದಾ ಬಯಸುತ್ತದೆ, ಲೌಕಿಕವಾದ ಸಂಪತ್ತನ್ನು, ಅಧಿಕಾರವನ್ನು ಇತ್ಯಾದಿಯನ್ನು. ಮೊದಲು ಒಂದು ಹಂತವನ್ನು ತಲ್ಪಲು ಯತ್ನಿಸುತ್ತದೆ. ಅದು ತಲುಪಿದಾಗಲಾದರೂ ಸಮಾಧಾನದಿಂದ ಇರುವುದೆ? ಪುನಃ ಇನ್ನೊಂದು ಆಸೆಯನ್ನು ಬೆಳೆಸಿಕೊಳ್ಳುತ್ತದೆ. ಹೀಗೆ ಏಳುವ ಆಸೆಯ ಅಲೆಗಳಲ್ಲಿ ಕಡೆಗೆ ತಾನೇ ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಸೆಗಿಂತಲೂ ಬಲವಾದ ಶಕ್ತಿ ಆಮಿಷ. ಇನ್ನೊಬ್ಬರು ಒಡ್ಡುವ ಅಥವಾ ಹೊರಗಿನಿಂದ ಬರುವ ಆಮಿಷದ ಹೊಡೆತವನ್ನು ತಾಳಲಾರದೆ ಮನುಷ್ಯ ಪತಿತನಾಗುವದುಂಟು. ತಾಮಸ ಎಂದರೆ ಜಡತ್ವ. ಆಲಸ್ಯ, ಅತಿ ನಿದ್ರೆ ತಾಮಸಕ್ಕೆ ಕಾರಣವಾಗುತ್ತವೆ. ಮತ್ತೊಂದು ಆತಂಕಕಾರಿ ಸಂಗತಿ ಎಂದರೆ ಹುಸಿ. ಮನುಷ್ಯ ತನ್ನ ಸ್ವಾರ್ಥಸಾಧನೆಗೋ, ಕೆಲವೊಮ್ಮೆ ಇನ್ನೊಬ್ಬರ ತೇಜೋವಧೆ ಮಾಡಬೇಕು ಎಂಬ ದುರುದ್ದೇಶದಿಂದಲೋ ಅಥವಾ ತನ್ನ ಬಾಯಿ ಚಪಲಕ್ಕಾಗಿಯೋ ಸುಳ್ಳು ಹೇಳುವನು. ಇದು ಒಂದು ಬಗೆಯ ಆತ್ಮ ವಂಚನೆಯಾಗುವ ಕಾರಣ ಪಾಪ ಸಂಚಯಕ್ಕೆ ಕಾರಣವಾಗುವುದು. ಅದೇ ರೀತಿ ವಿಷಯವು ಸಹ ದೊಡ್ಡ ಅಡ್ಡಿ. ಧರ್ಮಪಿತ ಬಸವಣ್ಣನವರು ಮೂರನೆಯ ವಾಕ್ಯದಲ್ಲಿ "ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯ" ಎಂದು ಲಿಂಗದೇವನಲ್ಲಿ ಬೇಡುತ್ತಾರೆ. ವಿಷಯಗಳು ಕಾಯ ವಿಕಾರಗಳಾಗಿ ದೇಹದಲ್ಲಿ ಮನೋವಿಕಾರಗಳಾಗಿ ಮನದಲ್ಲಿ ಇರುತ್ತವೆ ಎಂದರೇನು ? ವ್ಯಕ್ತಿಯು ವಿಷಯಗಳಿಗೆ ಸಂಬಂಧ ಪಟ್ಟ ಅನೇಕ ಅಶ್ಲೀಲ, ಅನೈತಿಕ ವಿಚಾರಗಳನ್ನು ಮಾತನಾಡುವುದರಲ್ಲಿ ಒಂದು ರೀತಿಯ (ವಿಕೃತ) ಸಂತೋಷ ಪಟ್ಟುಕೊಳ್ಳುತ್ತಾನೆ. ಅದು ಅವನ ಮನಸ್ಸಿನ ದುಷ್ಟ ಪ್ರವೃತ್ತಿಯನ್ನು, ಕುಸಂಸ್ಕಾರವನ್ನು ಬಿಂಬಿಸುತ್ತದೆ. ಸಾಧಕನಲ್ಲಿ ಅಂಥ ಚಾಪಲ್ಯ ಇರಬಾರದು. ಅದೇ ರೀತಿ ಕುಟಿಲತನವೂ ಒಂದು ದುಷ್ಟ ಪ್ರವೃತ್ತಿ. ಮನಸ್ಸಿನ ಒಳಗೆ ದ್ವೇಷ ಹೊರಗೆ ಅತಿ ಪ್ರೀತಿ - ಇದು ಕುಟಿಲತನ . ಮುಗ್ಧರು ಇಂಥ ಕುಟಿಲತನಕ್ಕೆ ಮರುಳಾಗಿ, ಮೋಸ ಹೋಗುವರು. ಮಾತಿನಲ್ಲಿ ಕುಹಕತನ ಒಳ್ಳೆಯದಲ್ಲ. ಇನ್ನೊಬ್ಬರಿಗೆ ವ್ಯಂಗವಾದ ರೀತಿಯಲ್ಲಿ ಚುಚ್ಚು ಮಾತನಾಡುವುದು ಕುಹಕತನ ಎನಿಸಿಕೊಳ್ಳುತ್ತದೆ. ಕ್ರೋಧ ಅಥವಾ ಕೋಪ ಅಂಥ ಇನ್ನೊಂದು ಆತಂಕ.

ತನುವಿನ ಕೋಪ ತನ್ನ ಹಿರಿಯತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು

ಎಂದು ಧರ್ಮಪಿತರು ಹೇಳುವಂತೆ ಕೋಪ ಬರುತ್ತಲೇ ಶರೀರವು ನಡುಗುತ್ತದೆ ಕಣ್ಣು ಕೆಂಪಾಗುತ್ತವೆ, ನಾಲಿಗೆ ತೊದಲುತ್ತದೆ. ಹೀಗಾಗಿ ಜನರು ಕೋಪಿಷ್ಠನ ಅವತಾರ ನೋಡಿ, "ನಾವು ಈತನನ್ನು ದೊಡ್ಡ ಮನುಷ್ಯನೆಂದು ತಿಳಿದಿದ್ದೆವು. ಅಬ್ಬಾ! ಎಷ್ಟು ಉದ್ವಿಗ್ನನಾಗುತ್ತಾನೆ." ಎಂದು ಅಗೌರವ ತಳೆಯುತ್ತಾರೆ. ಬಹಿರಂಗದ ಕೋಪ ವ್ಯಕ್ತಿಯ ವ್ಯಕ್ತಿತ್ವವನ್ನು ಹರಾಜು ಹಾಕಿದರೆ, ಮನದ ಕೋಪವು ವಿವೇಕ ಶಕ್ತಿಯನ್ನು ಕುಂದಿಸುತ್ತದೆ. ಮಾತಿನಲ್ಲಿ ಸಿಡುಕು, ಕೋಪ ಶತ್ರುಗಳ ಸಂಖ್ಯೆಯನ್ನು ವೃದ್ಧಿಸುತ್ತದೆ. ಅದೇ ಮಾತಿನಲ್ಲಿ ವಿನಯ, ಮೃದುತ್ವ ಶತ್ರುವನ್ನು ಸಹ ಪರಿವರ್ತಿಸುತ್ತವೆ.

ಕ್ಷುದ್ರತ್ವವು ಒಂದು ಹೀನ ಗುಣ. ಸದಾ ಇನ್ನೊಬ್ಬರಲ್ಲಿ ತಪ್ಪುಗಳನ್ನು ಹುಡುಕುವುದು, ಪ್ರೌಢವಾಗಿ, ಪ್ರೌಢ ವಿಚಾರಗಳನ್ನು ಚಿಂತಿಸದೆ ಸದಾ ಕ್ಷುಲಕ ವಿಚಾರಗಳನ್ನೇ ಮಾಡುವುದು, ಮಾತನಾಡುವುದು ಸಾಧಕನಿಗೆ ಭೂಷಣವಲ್ಲ. ಇನ್ನು ಮಿಥ್ಯೆಯೂ ಒಂದು ದೊಡ್ಡ ಅಡ್ಡಿ. ಹುಸಿ ಎನ್ನುವುದು ವ್ಯವಹಾರಕ್ಕೆ ಸಂಬಂಧಿಸಿದ ಸಂಗತಿಯಾದರೆ ಮಿಥ್ಯೆಯು ಸಿದ್ಧಾಂತಕ್ಕೆ ಸಂಬಂಧಿಸಿದ್ದು. ಬಹಳ ಜನರು ಬರೀ ಮಿಥ್ಯಾವಾದವನ್ನು ನಂಬಿ, ಮೂಢ ನಂಬಿಕೆ, ಅಂಧಶ್ರದ್ಧೆಯನ್ನು ಬೆಳೆಸಿಕೊಳ್ಳುವುದುಂಟು. ಶಕುನ-ಅಪಶಕುನ ಎಂಬ ಮಿಥ್ಯಾಜಾಲಕ್ಕೆ ಒಳಗಾಗಿ, ಆತ್ಮ ವಿಶ್ವಾಸವನ್ನು ಕುಂದಿಸಿಕೊಳ್ಳುವರು. ಆದ್ದರಿಂದ ಇವನ್ನೆಲ್ಲ ನನ್ನ ನಾಲಿಗೆಯ ಮೇಲಿನಿಂದ ತೆಗೆದುಹಾಕು ಲಿಂಗದೇವನೆ. ಏಕೆ ಎಂದರೆ ಈ ದುರ್ಗುಣಗಳು ನಿನ್ನ ಬಳಿಗೆ ನಾನು ಬರದಂತೆ ದಾರಿಯಲ್ಲೇ ತಡೆಹಾಕುತ್ತವೆ. ಇವನ್ನೆಲ್ಲ ಓಡಿಸಿ ನನ್ನ ಪಂಚ ತತ್ವ(ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ)ಗಳನ್ನೆಲ್ಲ ದೈವೀಕರಿಸು , ಭಕ್ತರನ್ನಾಗಿ ಮಾಡು ತಂದೆ!

47. ದೇವನಲ್ಲಿ ಮೊರೆ

ಎಂತು ಶಿವಭಕ್ತಿಯ ನಾನು ಉಪಮಿಸುವೆನಯ್ಯಾ?
ಎಂತು ಶಿವಾಚಾರವೆನಗೆ ವೇದ್ಯವಪ್ಪುದಯ್ಯಾ?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಿಂದ
ಕಟ್ಟುವಡೆದೆನು.
ಹಸಿವು, ತೃಷೆ ವ್ಯಸನದಿಂದ ಕುದಿಯುತ್ತಿದ್ದೇನೆ.
ಪಂಚೇಂದ್ರಿಯ ಸಪ್ತಧಾತು
ಹರಿಹಂಚುಮಾಡಿ ಕಾಡಿಹವಯ್ಯಾ !
ಅಯ್ಯಾ, ಅಯ್ಯಾ ಎನ್ನ ಹುಯ್ಯಲ ಕೇಳಯ್ಯ
ಲಿಂಗದೇವಾ, ನಾನೇವೆನೇವೆನಯ್ಯಾ! - ಬ.ವ.ದೀ- 45

ಸಾಧಕನಿಗೆ ಬಹು ಬಗೆಯ ಹಂಬಲವಿರುತ್ತದೆ. ಭಕ್ತಿಯೇ ಅವನ ಜೀವಾಳ. ಭಕ್ತಿಯ ಪರಾಕಾಷ್ಠೆಯನ್ನು ತಲ್ಪಬೇಕು ಎಂದು ಕನಸು ಕಾಣುತ್ತಿರುತ್ತಾನೆ. ಎಂದಿಗೆ ಆ ಸ್ಥಿತಿ ಸಾಧ್ಯವಾಗುವುದೋ ಎಂದು ಹಲುಬುತ್ತಿರುತ್ತಾನೆ. ಯೋಗ, ಧ್ಯಾನ, ಪೂಜೆ ಇತ್ಯಾದಿ ಶಿವಾಚಾರಕ್ಕೆ ಸಂಬಂಧಿಸಿದ ಕ್ರಿಯೆಗಳನ್ನು ಚಾಚೂ ತಪ್ಪದೆ ಮಾಡಬೇಕು ಎಂಬ ಆಸೆಯನ್ನು ಹೊತ್ತಿರುತ್ತಾನೆ. ಆದರೆ ಏನು ಮಾಡುವುದು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳು ಮುನ್ನಡೆ ಸಾಧಿಸದಂತೆ ಕಟ್ಟಿ ಹಾಕುತ್ತವೆ. ಹಸಿವೆ, ತೃಷೆ, ವಿಷಯಗಳು ಕುದಿಸುತ್ತವೆ. ನಿಧಾನಕ್ಕೆ ಏಕಾಗ್ರತೆಯಿಂದ ಪೂಜಿಸಿ, ಧ್ಯಾನಿಸಬೇಕು ಎಂದುಕೊಳ್ಳುತ್ತಾನೆ.ಆದರೆ ಹೊಟ್ಟೆಯ ಕಾಟ ಬೇಗನೆ ಪೂಜೆ ಮುಗಿಸಲು ಆತುರ ಪಡುತ್ತದೆ. ಬಾಯಾರಿಕೆಯು ಬೇಗನೆ ಪೂಜೆ ಮುಗಿಸಿ,ನೀರು ಕುಡಿದು ಸಮಾಧಾನ ಹೊಂದಲು ಪ್ರೇರಣೆ ನೀಡುತ್ತದೆ.ವ್ಯಸನ ಅಂದರೆ ದೈಹಿಕ ಕಾಮನೆಗಳು ಕಾಡತೊಡಗುತ್ತವೆ.

ಪಂಚೇಂದ್ರಿಯಗಳು ಶರೀರಕ್ಕೆ ಕಾರಣವಾಗಿರುವ ಮೂಲದ್ರವ್ಯ ಸಪ್ತಧಾತುಗಳಾದ-ರಸ,ರುಧಿರ, ಮಾಂಸ, ಮೇದಸ್,ಅಸ್ಥಿ, ಮಜ್ಜೆ, ಶುಕ್ಲ, ಇವು ಸ್ವಭಾವ ಜನ್ಯ ಗುಣಗಳಿಂದ ಕಿತ್ತು ತಿನ್ನುತ್ತವೆ. ಎಂತಹ ಕರುಣಾಜನಕ ಪರಿ(ಮನ)ಸ್ಥಿತಿ. ಅದಕ್ಕಾಗಿ ಸಾಧಕನು ಲಿಂಗದೇವಾ ನನ್ನ ಆಕ್ರಂದನವನ್ನು ಕೇಳು.ಇಂತಹ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ನಾನು ಏನು ಮಾಡಲಿ? ಎಂದು ಲಿಂಗದೇವನಲ್ಲಿ ಬಿನ್ನವಿಸಿಕೊಳ್ಳುತ್ತಿದ್ದಾನೆ.

48.ಶರಣರಿಂದ ಅಭಯದ ನಿರೀಕ್ಷೆ

ಕಾಯ ವಿಕಾರ ಕಾಡಿಹುದಯ್ಯ;
ಮನೋವಿಕಾರ ಕೂಡಿಹುದಯ್ಯಾ;
ಇಂದ್ರಿಯ ವಿಕಾರ ಸುಳಿವುದಯ್ಯಾ!
ಸುಳಿವಿನೊಳಗೆ ಸುಳಿಯುತ್ತಲಿದ್ದೇನೆ; ಸಿಲುಕಿಸದಿರಯ್ಯಾ
ಅನ್ಯ ಚಿತ್ತವಿರಿಸದಿರಯ್ಯಾ; ನಿಮ್ಮ ಚಿತ್ತವಿರಿಸಯ್ಯಾ!
ಅನುಪಮ ಸುಖಸಾರಾಯ ಶರಣರಲ್ಲಿ
ಲಿಂಗದೇವಯ್ಯಾ, ಇದನ್ನೇ ಬೇಡುವೆನಯ್ಯಾ ! ಬ.ವ.ದೀ-46

ಕಾಮಕ್ರೋಧಾದಿಗಳಿಂದ ಶರೀರವು ಉದ್ರಿಕ್ತವಾಗುವುದು.ಆಸೆಗಳು,ವಿಷಯಗಳಿಂದ ಮನಸ್ಸು ಉದ್ರಿಕ್ತವಾಗುವುದು. ಪಂಚಜ್ಞಾನೇಂದ್ರಿಯಗಳು ಹೊರಗಿನಿಂದ ಬರುವ ಶಬ್ದ, ಸ್ಪರ್ಶ, ರೂಪ, ರಸ,

ಗಂಧಗಳಿಂದ ಪ್ರಚೋದಿತವಾಗುವವು. ಅಶ್ಲೀಲ ದೃಶ್ಯಗಳಿಂದ ಕಣ್ಣು, ಅಶ್ಲೀಲ ಮಾತುಗಳಿಂದ ಕಿವಿ, ಹೀಗೆ ಇಂದ್ರಿಯಗಳು ವಿಕಾರಕ್ಕೆ ಒಳಗಾಗುತ್ತವೆ. ಇವೆಲ್ಲವೂ ಕೂಡಿ, ನದಿಯ ಪ್ರವಾಹದಲ್ಲಿ ಸುಳಿಗಳು ಇರುವಂತೆ ಈ ಜೀವಾತ್ಮನನ್ನು ನಿಸ್ಸಹಾಯಕ ಪರಿಸ್ಥಿತಿಗೆ ದೂಡುತ್ತವೆ. ಅದಕ್ಕಾಗಿ ಸಾಧಕಜೀವಿ ಬಸವಣ್ಣನವರು "ಇಂಥ ಇಂದ್ರಿಯ ವಿಕಾರದ ಸುಳಿಯಲ್ಲಿ ಸಿಲುಕಿಸದಿರು. ನನ್ನ ಚಿತ್ತವು ಯಾವುದೇ ಅನ್ಯ ವಿಷಯದ ಕಡೆಗೆ ಹರಿಯದೆ ಕೇವಲ ನಿನ್ನಲ್ಲೇ ನೆಲೆಸುವಂತೆ, ಮಾಡು "ಎಂದು ಲಿಂಗದೇವನಲ್ಲಿ ಬೇಡುತ್ತ ತಮ್ಮ ಸಾಧನೆ ಸುಗಮವಾಗಲು ಈಗಾಗಲೇ ದೇವನ ಅನುಪಮ ಅಧ್ಯಾತ್ಮಿಕ ಆನಂದವನ್ನು ಹೊಂದಿರುವ ಶರಣರಲ್ಲಿ ಸಹ ಅವರ ನೆರವಿಗಾಗಿ ಬೇಡುವರು. ದೇವನು ತುಸು ನಿರ್ಲಕ್ಷ್ಯ ತೋರಿದರೂ ಪರವಾಗಿಲ್ಲ ಕಡೆಗೆ ಶರಣರಾದರೂ ಗಮನಿಸಬಹುದೆಂಬ ಆಶಯವಿಲ್ಲಿದೆ.

49. ಮನವನ್ನು ನಿಯಂತ್ರಿಸಲು ದೇವನಲ್ಲಿ ಮೊರೆ

ಬಂದ ಯೋನಿಯನರಿದು ಸಲಹೆನ್ನ ತಂದೆ !
ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು;
ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು
ಎನ್ನ ತಂದೆ ಲಿಂಗದೇವಾ,
ಇದ ಮಾಣಿಸು ನಿಮ್ಮ ಧರ್ಮ ! - ಬ.ವ.ದೀ.47

ದೇವನೆ, ನೀನು ಜೀವಾತ್ಮರೆಲ್ಲರ ತಂದೆ; ನಿತ್ಯ-ನಿರ್ಮಲನು, ಸತ್ಯ ಶಾಶ್ವತನು, ಕಳಂಕ ರಹಿತನು. ಆದರೆ ನಿನ್ನ ದೃಷ್ಟಿಯಲ್ಲಿ ಹುಲು ಮಾನವರನ್ನು ಅಳೆಯಬಾರದು. ನಾವೆಲ್ಲ ಯೋನಿಜರು, ತಾಯಿಯ ಗರ್ಭ ಸಂಜಾತರು ಎಂಬ ಬಗ್ಗೆ ಸಹಾನುಭೂತಿ ಇರಬೇಕು. ಮನ ಎಂಬ ಇಂದ್ರಿಯದ ಕಾಟಕ್ಕಾಗಿಯೇ ಈ ಜೀವಿಗೆ ಮಾನವ ಎಂಬ ಹೆಸರು ಬಂದಿರುವುದು. ಈ ಮನಸ್ಸು ಗತಿಗೆಡಿಸುವುದು, ಮತಿಗೆಡಿಸುವುದು ತನ್ನ ದೌರ್ಬಲ್ಯಗಳಿಂದ. ಆದ್ದರಿಂದ ಮಾನವನೆಂಬ ಸಹಾನುಭೂತಿ ಹೊಂದಿ ನನ್ನ ಮೇಲೆ ಕೃಪೆ ಇಡು; ದಯವಿಟ್ಟು ಮನಸ್ಸನ್ನು ನಿಯಂತ್ರಿಸು, ದೈವೀಕರಿಸು.

50. ಸುಳಿದೆಗೆದು ಬೆಳೆಸು ದೇವಾ

ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು ಎಚ್ಚರಲೀಯದು
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗತಂದೆ;
ಸುಳಿದೆಗೆದು ಬೆಳೆವೆನು ಲಿಂಗದೇವಾ. - ಬ.ವ.ದೀ.48

ಮಾನವ ದೇಹ ದೇವರು ಕೊಟ್ಟ ಉತ್ಕೃಷ್ಟ ವರ. ಇದು ಫಲವತ್ತಾದ ಭೂಮಿಯಂತೆ. ಬೆಳೆಯುವ ಭೂಮಿಯಲ್ಲಿ ಅಪಾರ ಕಸ(ಕಳೆ) ಬೆಳೆದುಬಿಟ್ಟರೆ ಆಗ ಬೆಳೆಯು ಸರಿಯಾಗಿ ಬರದು. ಗಿಡವು ಕುಂಠಿತಗೊಳ್ಳುವುದು. ತೆಂಗಿನ ಗಿಡದಂತಹವುಗಳ ಸುಳಿಯು ಮೇಲಕ್ಕೆ ಏರುವುದಿಲ್ಲ. ಅದೇ ರೀತಿ ಮಾನವ ಶರೀರ ಎಂಬ ಭೂಮಿಯಲ್ಲಿ ವಿಕಾರಗಳು, ಕಾಮ ಕ್ರೋಧಾದಿಗಳು ಎಂಬ ಕಳೆ ಇದ್ದುದೇ ಆದರೆ ವ್ಯಕ್ತಿತ್ವವು ವಿಕಸನವಾಗದು. ಭಕ್ತಿ-ಜ್ಞಾನ ಎಂಬ ಸಸಿಗಳು ಬೆಳೆಯುವುದೇ ಇಲ್ಲ. ಮನಸ್ಸು ಜಡಗೊಂಡ ಸರೋವರದಂತಾಗುತ್ತದೆ. ಅಲ್ಲಿ ಅಧ್ಯಾತ್ಮಿಕ ಎಚ್ಚರವು ಮೂಡುವುದೇ ಇಲ್ಲ. ಅವಗುಣಗಳು ಎಂಬ ಕಸವನ್ನು ಕಿತ್ತು ಹಾಕು ಲಿಂಗದೇವಾ, ಭಕ್ತಿ-ಜ್ಞಾನಗಳಿಂದ ಕೂಡಿದ ನನ್ನ ವ್ಯಕ್ತಿತ್ವವು ಸುಳಿಯನ್ನು ಮೇಲೇರಿಸಿಕೊಳ್ಳುತ್ತ ಸೊಂಪಾಗಿ ಬೆಳೆಯುವ ಗಿಡದಂತೆ ಮೇಲೇರುತ್ತದೆ.

51. ವಿಷಯದಿಂದ ದೂರವಿರಿಸು

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯಾ;
ಪಶುವೇನ ಬಲ್ಲುದು, ಹಸುರೆಯೆಂದೆಳಸುವುದು
ವಿಷಯರಹಿತನ ಮಾಡಿ, ಭಕ್ತಿ ರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬ ಉದಕವನೆರೆದು
ನೋಡಿ ಸಲಹಯ್ಯಾ, ಲಿಂಗದೇವಾ - ಬ.ವ.ದೀ - 49

ಪಂಚಜ್ಞಾನೇಂದ್ರಿಯಗಳ ಆಹಾರವಾದ ವಿಷಯಗಳನ್ನು ತಂದು, ಮುಗ್ಧ ಪಶುವಿನ ಮುಂದೆ ಹಸಿರು ಹುಲ್ಲನ್ನು ಹರಡಿದಂತೆ, ನನ್ನ ಮನಸ್ಸಿನ ಮುಂದೆ ಹರಡಬೇಡ. ಮುಗ್ಧ ಪಶುವಿಗೇನು ಗೊತ್ತು ತನ್ನ

ಯಜಮಾನನ ಹೊಲ, ಪರರ ಹೊಲ ಎಂಬ ಸಂಗತಿ. ಹಸಿರು ಕಂಡಲ್ಲಿ ನುಗ್ಗುವುದು ಅದರ ಸ್ವಾಭಾವಿಕ ಗುಣ. ಅದೇ ರೀತಿ ಈ ಮನಸ್ಸು ಸಹ ಬಹು ಚಂಚಲ. ಎಲ್ಲಿ ತನ್ನ ಬಯಕೆಗಳ ತೃಪ್ತಿಗೆ ಆಹಾರವು ಸಿಗುತ್ತೋ ಅಲ್ಲಿಗೆ ನುಗ್ಗುತ್ತದೆ. ಮನಸ್ಸಿನ ಈ ಪ್ರವೃತ್ತಿ ಬಿಡಿಸಿ, ಅದಕ್ಕೆ ಭಕುತಿಯೆಂಬ ಹುಲ್ಲನ್ನು ಮನಸ್ಸು ತಣಿಯುವಷ್ಟು ತಿನ್ನಿಸಿ, ಸುಬುದ್ಧಿ(ಸುಜ್ಞಾನ) ಎಂಬ ನೀರನ್ನು ಕುಡಿಸಿ, ಅದು ಅತ್ತಿತ್ತ ಹರಿಯದಂತೆ ಸಂತೃಪ್ತಿಗೊಂಡು ಇರುವಂತೆ ಮಾಡಿ ನನ್ನನ್ನು ಅರ್ಥಾತ್ ಈ ಜೀವಾತ್ಮನನ್ನು ರಕ್ಷಿಸಿ, ಸಲಹು ಎಂದು ಲಿಂಗದೇವನಲ್ಲಿ ಸಾಧಕ ಹೃದಯಿ ಬಸವಣ್ಣನವರು ಪ್ರಾರ್ಥಿಸುತ್ತಾರೆ.

52. ಕೆಸರಲ್ಲಿ ಬಿದ್ದ ಪಶು

ಕೆಸರಲ್ಲಿ ಬಿದ್ದ ಬಡ ಪಶುವಿನಂತೆ
ಆನು ದೆಸೆದೆಸೆಗೆ ಬಾಯಿಬಿಡುತ್ತಿದ್ದೇನಯ್ಯಾ !
ಆರೈವರಿಲ್ಲ - ಅಕಟಕಟಾ ಪಶುವೆಂದನ್ನ !
ಲಿಂಗದೇವ ಕೊಂಬ ಹಿಡಿದೆತ್ತುವನ್ನಕ್ಕ - ಬ.ವ.ದೀ.50

ಗ್ರಾಮೀಣ ಪ್ರದೇಶಗಳಲ್ಲಿ ದನಗಳು ಹುಲ್ಲು ಮೇಯ್ದು, ನೀರನ್ನು ಕುಡಿಯಲು ಗುಂಡಿ, ಕೆರೆ ಕಟ್ಟೆಗಳಿಗೆ ಧಾವಿಸುತ್ತವೆ. ಕೆಲವೊಮ್ಮೆ ಕಾಲಿಟ್ಟಾಗ ಕೆಸರಿನಲ್ಲಿ ಸಿಕ್ಕಿಬೀಳುತ್ತವೆ. ನೀರಾದರೆ ಅವು ಈಜುತ್ತವೆ. ಕೆಸರಿನಲ್ಲಿ ಈಜಲು ಬರದು. ಈಜುವ ರೀತಿ ಅವು ಕಾಲು ಬಡಿಯುತ್ತವೆ. ಆದರೆ ಮುಂದೆ ಸಾಗದೆ ಮತ್ತಷ್ಟು ಕೆಸರಿನಲ್ಲೇ ಇಳಿಯುತ್ತವೆ. ಆಗ ಅವು ನಿಸ್ಸಹಾಯಕವಾಗಿ ಸುತ್ತಮುತ್ತ ನೋಡುತ್ತವೆ ಯಾರಾದರೂ ಗಮನಿಸಿ ಬಂದು, ಆರೈದು ಸಲಹುತ್ತ, ಕೊಂಬಿಗೆ ಹಗ್ಗದ ಕುಣಿಕೆ ಹಾಕಿ ಮೇಲಕ್ಕೆ ಎಳೆದುಕೊಳ್ಳುವರೇನೋ ಎಂದು ಮುಗ್ಧ ಪಶು ಹಂಬಲಿಸುತ್ತದೆ.

ಅದೇ ರೀತಿ ಈ ಜೀವಾತ್ಮ ಎನ್ನುವ ಪಶು ಸಂಸಾರದ ಕೆಸರಿನಲ್ಲಿ ಸಿಕ್ಕಿ ಬೀಳುತ್ತದೆ. ಒಮ್ಮೆ ಅದಕ್ಕೆ ಎಚ್ಚರಿಕೆ ಮೂಡುತ್ತದೆ. ಇದರಿಂದ ಪಾರಾಗಬೇಕು ಎಂದು ಹಾತೊರೆಯುತ್ತದೆ. ಗುರು (ಜಂಗಮ) ಎನ್ನುವ ಹಿತೈಷಿ ಬಂದು ಜ್ಞಾನ ಎನ್ನುವ ಹಗ್ಗವನ್ನು ಎಸೆದು ಸದ್ಭಕ್ತಿ-ಸದಾಚಾರ ಎಂಬ ಎರಡು ಕೊಂಬುಗಳ ನೆರವಿನಿಂದ ಈ ಜೀವಾತ್ಮವನ್ನು ಎತ್ತುವ ತನಕ ಅದಕ್ಕೆ ನೆಮ್ಮದಿ ಇಲ್ಲ.

53. ಪಶುಪತಿಗೆ ಮೊರೆ

ಬಡ ಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ?
ಶಿವ ಶಿವಾ! ಹೋದಹೆ ಹೋದಹೆನಯ್ಯಾ
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ
ಪಶುವಾನು, ಪಶುಪತಿ ನೀನು !
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯಾ, ನಿಮ್ಮ ಬಯ್ಕದಂತೆ ಮಾಡು ಲಿಂಗದೇವಾ. - ಬ.ವ.ದೀ.51

ಕೆಸರಿನಲ್ಲಿ ಬಿದ್ದು ನಿಸ್ಸಹಾಯಕವಾದ ಪಶು ಕಾಲನ್ನು ಬಡಿಯುತ್ತದೆ, ಈಜಲಿಕ್ಕೆ ಬರದೆ ಇರುವುದರಿಂದ ಬೇರೇನೂ ದಾರಿ ಇರದು. ಅದೇ ರೀತಿ ಶಿವನೇ ನಿನ್ನ ಧ್ಯಾನದ ಮೂಲಕ ಸಂಸಾರ ಸಾಗರವನ್ನು ಈಜೋಣ ಎಂದುಕೊಂಡರೆ ಇದು ಕೆಸರಿನಂತೆ ಮುಳುಗಿಸುತ್ತಿದೆ. ಪ್ರಯತ್ನ ಮಾಡಿದಷ್ಟೂ ಮತ್ತೆ ಕೆಳಗೇ ಇಳಿಯುವಂತಹ ಪರಿಸ್ಥಿತಿ. ಹೇಗಾದರೂ ಮಾಡಿ ನಿನ್ನ ಕಡೆಗೆ ನನ್ನನ್ನು ಎಳೆದುಕೊ. ಜೀವಾತ್ಮವೇ ಪಶು, ಭವ ಬಂಧನವೇ ಪಾಶ, ನೀನೇ ಪಶುಪತಿ. ನೀನು ನನ್ನನ್ನು ರಕ್ಷಿಸು. ಇಲ್ಲದಿದ್ದರೆ ನಿನಗೇ ಅಪವಾದ ! ದನಗಳು ಬೇರೆಯವರ ಹೊಲಕ್ಕೆ ನುಗ್ಗಿ ಅವರ ಬೆಳೆಯನ್ನು ತಿಂದರೆ ಆಗ ಆ ದನಗಳನ್ನು ಚೆನ್ನಾಗಿ ಥಳಿಸುತ್ತಾರಲ್ಲದೆ ಕೊಂಡವಾಡೆಗೆ ಹಾಕುವರು. ಮಾಲಿಕನು ಹೋಗಿ ದಂಡಕೊಟ್ಟು ಆ ದನಗಳನ್ನು ಬಿಡಿಸಿಕೊಂಡು ಬರಬೇಕಾಗುತ್ತದೆ. ದನವು ಮಾಡಿದ ತಪ್ಪಿಗೆ ಮಾಲಿಕನಿಗೆ ಶಿಕ್ಷೆ. ಅದೇ ರೀತಿ ನಾನು ಮಾಡಿದ ತಪ್ಪಿಗೆ ನಿನ್ನನ್ನು ದೂಷಿಸುವರು. "ಈತ ದೇವ ಭಕ್ತನಂತೆ, ಮಾಡುವ ಕೆಲಸ ನೋಡು "ಎನ್ನಬಹುದು. ಆದ್ದರಿಂದ ನೀನು ನನ್ನನ್ನು ಒಳ್ಳೆಯತನದಲ್ಲಿ ಇಟ್ಟು ನೀನು ಬೈಸಿಕೊಳ್ಳದಂತೆ ಎಚ್ಚರಿಕೆ ವಹಿಸು.

54. ಗುರುವಿಗಾಗಿ ಹಂಬಲ

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ

'ಅಂಬಾ' 'ಅಂಬಾ' ಎಂದು ಕರೆವುತ್ತಲಿದ್ದೇನೆ;
'ಅಂಬಾ' 'ಅಂಬಾ' ಎಂದು ಒರಲುತ್ತಲಿದ್ದೇನೆ
ಲಿಂಗದೇವ ಬಾಳು ಬಾಳೆಂಬನ್ನಕ್ಕ ! - ಬ.ವ.ದೀ.52

ದನಗಳನ್ನು ಮೇಯಿಸಲು ದನಗಾಹಿ ಅವುಗಳನ್ನು ಅಡವಿಗೆ ಒಯ್ದಿರುತ್ತಾನೆ. ಗುಂಪಿನಲ್ಲಿ ಅವು ಮೇಯುತ್ತಿದ್ದು ಸಂಜೆಯಾದಾಗ ಅವನ್ನೆಲ್ಲ ಒಟ್ಟು ಮಾಡಿಕೊಂಡು ದನಗಾಹಿ ಮನೆಯತ್ತ ಹೊರಡುತ್ತಾನೆ. ಆಗ ಹುಲ್ಲನ್ನು ಇನ್ನಷ್ಟು ಮೇಯುವ ಆಸೆಯಿಂದ ಒಂದು ಪಶು ಹಿಂದೆ ಉಳಿದು ಬಿಡುತ್ತದೆ. ತಿನ್ನುವುದರಲ್ಲಿ ಅದು ಮೈಮರೆತಿರುವಾಗ ಉಳಿದ ಪಶುಗಳು ಮುಸ್ಸಂಜೆಯಲ್ಲಿ ಮನೆಯತ್ತ ಧಾವಿಸುತ್ತವೆ. ಕತ್ತಲು ಇಳಿಯುತ್ತದೆ. ಆಗ ಹಿಂದುಳಿದ ದನಕ್ಕೆ ಎಚ್ಚರ ಉಂಟಾಗುತ್ತದೆ. ಮನೆಯ ನೆನಪಾಗುತ್ತದೆ. ಆದರೆ ದಾರಿ ತಿಳಿಯಲಾಗಿದೆ. ಕಾಡು ಪ್ರಾಣಿಗಳ ಭಯ ಗರಿಗೆದರುತ್ತದೆ. ದುಃಖ, ಗಾಬರಿ, ಅನಾಥ ಪ್ರಜ್ಞೆಯಿಂದ ಅಂಬಾ ಅಂಬಾ ಎಂದು ಕರೆಯಲು ಶುರುಮಾಡುತ್ತದೆ. ಯಾರೂ ಪ್ರತಿಕ್ರಿಯೆ ಕೊಡದಿದ್ದಾಗ ಅದರ ದುಃಖ ಮೇರೆ ಮೀರಿ ಹೆಚ್ಚಿನ ಸಂಕಟದಿಂದ ಒರಲಲು ಆರಂಭಿಸುತ್ತದೆ.

ದನಗಾಹಿಯು ಮನೆಮನೆಗೆ ಅವರವರ ದನಗಳನ್ನು ತಲ್ಪಿಸುತ್ತಾನೆ. ತಪ್ಪಿಸಿಕೊಂಡ ದನದ ಮನೆಯ ಬಳಿ ಹೋದಾಗ ಅದು ಹಿಂದೆ ಉಳಿದುದು ಅರಿವಿಗೆ ಬರುತ್ತದೆ. ಆಗ ಒಂದು ಪಂಜು ತೆಗೆದುಕೊಂಡು ಪುನಃ ಹೊರಡುತ್ತಾನೆ. ತಾನು ಮೇಯಲು ಬಿಟ್ಟಿದ್ದ ಸ್ಥಳಕ್ಕೆ ಬಂದಾಗ ಆ ಪಶು ಅಂಬಾ ಎಂದು ಆಕ್ರಂದನ ಮಾಡುವ ಸಂಕಟದ ಧ್ವನಿ ಕೇಳುತ್ತದೆ. ತಕ್ಷಣ ಅವನು ಶಿಳ್ಳೆ ಹಾಕಿ, ಅಥವಾ ಧ್ವನಿ ಮಾಡಿ ತಾನು ಬಂದಿರುವುದಾಗಿಯೂ, ಹೆದರಬಾರದೆಂದು ಅಭಯ ನೀಡಿದಾಗ ಅದಕ್ಕೆ ಸಮಾಧಾನವಾಗುತ್ತದೆ. ದನಗಾಹಿ ಆ ಪಶುವನ್ನು ಮನೆಗೆ ಕರೆದೊಯ್ಯುತ್ತಾನೆ.

ಅದೇ ರೀತಿ ಈ ಜೀವಾತ್ಮವು ಭವದ ಅರಣ್ಯದಲ್ಲಿ ವಿಷಯಗಳು ಎಂಬ ಮೇವು ಮೇಯುತ್ತ ಕಾಲ ಕಳೆದಿದೆ. ಇನ್ನಿತರ ಅನೇಕ ಜಾಗೃತಗೊಂಡ ಜೀವಾತ್ಮರು ಗುರು ಎಂಬ ಗೋವಳನ ಹಿಂಬಾಲಕರಾಗಿ ತಮ್ಮ ಮೂಲ ನೆಲೆಯನ್ನು ಸೇರಿದರು. ಈ ಜೀವಾತ್ಮನಿಗೆ ಎಚ್ಚರವಾದಾಗ ಏಕಾಂಗಿತನ, ಅನಾಥ ಪ್ರಜ್ಞೆ ಕಾಡತೊಡಗಿದೆ. ಆಗ ದೇವನ ಹಂಬಲ ಮೂಡುತ್ತದೆ. ಮೂಲನೆಲೆಯಾದ ಪರಮಾತ್ಮನನ್ನು ಸೇರುವ ಆತುರವು ಉಂಟಾಗುತ್ತದೆ. ಆದರೆ ದಾರಿ ತಿಳಿಯದು. ಅಜ್ಞಾನದ ದಟ್ಟ ಕತ್ತಲು ಬೇರೆ. ಸಾಧಕನ ಜೀವನದ ಕಾಳರಾತ್ರಿ (Dark night of the soul)ಯ ಚಟುವಟಿಕೆ ಶುರುವಾಗುತ್ತದೆ. ಕಾಯ ವಿಕಾರ, ಮನೋವಿಕಾರ, ಇಂದ್ರಿಯ ವಿಕಾರಗಳೆಂಬ ಕ್ರೂರ ಮೃಗಗಳು ಬೇರೆ ಎಲ್ಲಿ ದಾಳಿ ಮಾಡಿ ಕೊಲ್ಲುತ್ತವೋ ಎಂಬ ಭಯ ಬೇರೆ. ಜೀವಾತ್ಮನ ಆಕ್ರಂದನ ಮುಗಿಲು ಮುಟ್ಟುತ್ತದೆ. ಆಗ ಇವನ ಬಾಳಿಗೆ ತಿರುವು ಕೊಡುವಂತೆ ಗುರುವಿನ ಆಗಮನವಾಗುತ್ತದೆ. ದೇವನ ಪ್ರತಿನಿಧಿಯಾಗಿ ಗುರುವು ಬಂದು ಬಾಳು ಬಾಳು ಎಂಬ ಅಭಯ ಮುದ್ರೆಯಿಂದ ಆಶೀರ್ವದಿಸಿದಾಗ ಈ ಜೀವಾತ್ಮನು ಸಮಾಧಾನಗೊಂಡು ಶರಣಾಗುತ್ತಾನೆ.

55. ಸಮುದ್ರದ ಸಿಂಪು

ಸಮುದ್ರದೊಳಗಣ ಸಿಂಪಿನಂತೆ
ಆನು ಬಾಯಿ ಬಿಡುತ್ತಿದ್ದೇನಯ್ಯಾ !
ನೀವಲ್ಲದೆ ಮತ್ತಾರು ಎನ್ನನರಿವರಿಲ್ಲ ನೋಡಯ್ಯಾ, ಲಿಂಗದೇವಾ
ನೀವಲ್ಲದೊಳಕೊಂಬವರಿಲ್ಲವಯ್ಯಾ ! - ಬ.ವ.ದೀ.53

ಸಮುದ್ರದಲ್ಲಿ ಮುತ್ತನ್ನು ತಯಾರಿಸುವ ಸಿಂಪು ಅಂದರೆ (ಕಪ್ಪೆ) ಚಿಪ್ಪು ಅರ್ಧ ಬಾಯಿ ತೆರೆದುಕೊಂಡು ತೇಲುತ್ತಿರುತ್ತದಂತೆ. ಅದು ಸ್ವಾತಿ ಮಳೆಯ ಹನಿಗಾಗಿ ಹಂಬಲಿಸುತ್ತಲಿರುತ್ತದಂತೆ. ಆ ಹನಿ ಬೀಳುತ್ತಿದ್ದಂತೆಯೇ ಕಡಲಿನ ಆಳಕ್ಕೆ ಇಳಿದು ಮುತ್ತನ್ನು ಉತ್ಪಾದಿಸುತ್ತದೆಯಂತೆ.

ಅದೇ ರೀತಿ ಸಾಧಕನ ಹೃದಯ ಲಿಂಗದೇವಾನುಗ್ರಹದ ಹನಿಗಾಗಿ ಹಂಬಲಿಸುತ್ತಲಿರುತ್ತದೆ. ಅದು ದೊರೆಯುತ್ತಲೇ ಮೌನ ತಾಳುತ್ತದೆ. ನಂತರ ದಿವ್ಯಾನುಭವದ ಮುತ್ತು ಪ್ರಾಪ್ತಿಯಾಗುತ್ತದೆ. ಅದಕ್ಕಾಗಿಯೇ ಸಾಧಕ ಹೃದಯಿ ಬಸವಣ್ಣನವರ ಹೃದಯವು ಸಹಿತ ದೇವಾನುಗ್ರಹಕ್ಕಾಗಿ ಹಂಬಲಿಸುತ್ತಲಿದೆ. ದೇವಾ, ನನ್ನ ಮನಸ್ಥಿತಿಯನ್ನು ಮತ್ತಾರೂ ಅರ್ಥ ಮಾಡಿಕೊಳ್ಳರು. ಉಳಿದವರೆಲ್ಲ ಲೌಕಿಕ ಸಂಪತ್ತಿಗೆ, ಆಸ್ತಿಗೆ ಅಧಿಕಾರಕ್ಕೆ ಕೀರ್ತಿವಾರ್ತೆಗೆ ಹಂಬಲಿಸಿದರೆ ನಾನು ನಿನ್ನ ಅನುಗ್ರಹಕ್ಕಾಗಿ ಹಂಬಲಿಸುವುದು, ಲೋಕದ ಜನತೆಗೆ ವಿಚಿತ್ರವಾಗಿ ತೋರುತ್ತದೆ. ಲೋಕದ ಜನ ನನ್ನನ್ನು ಮರುಳನೆಂದು ದೂರವಿಡಬಹುದು. ಆದರೆ ನೀನು ಹಾಗೆ ಭಾವಿಸದೆ ನನ್ನನ್ನು ಒಳಗೊಂಡು, ಅನುಗ್ರಹವನ್ನು ನೀಡು.

56. ಕರೆ ಕೇಳದೆ ಲಿಂಗದೇವಾ ?

ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ
ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ
ಓ ಎನ್ನಲಾಗದೇ ಅಯ್ಯಾ?
ಆವಾಗಳೂ ನಿಮ್ಮ ಕರೆವುತ್ತಲಿದ್ದೇನೆ,
ಮೌನವೇ, ಲಿಂಗದೇವಾ ? - ಬ.ವ.ದೀ.54

ಒಂದು ಮಗು ತಾಯಿ ಅಥವಾ ತಂದೆಯನ್ನು ಹುಡುಕುವಾಗ ಮೊದಲು ಕರೆಯುತ್ತದೆ. ಅವರು ಪ್ರತಿಕ್ರಿಯೆ ನೀಡದೆ ಇದ್ದಾಗ ನೋವಿನ ಧ್ವನಿಯಲ್ಲಿ ಒರಲಲು ಪ್ರಾರಂಭ ಮಾಡುತ್ತದೆ. ಅದೇ ರೀತಿ ಸಾಧಕ ಬಸವಣ್ಣನವರು ದೇವರಿಗಾಗಿ ಹಂಬಲಿಸುತ್ತಿದ್ದಾರೆ.

''ಅಯ್ಯಾ, ಅಪ್ಪಾ, ತಂದೆ ಎಂದು ನಿನ್ನನ್ನು ಕರೆಯುತ್ತಲಿದ್ದೇನೆ ನಿನ್ನಿಂದ ಪ್ರತಿಕ್ರಿಯೆ ಇಲ್ಲದ್ದು ನೋಡಿ ದುಃಖದಿಂದ ಒರಲುತ್ತಲಿದ್ದೇನೆ. ನೀನು ಏಕೆ ಓ ಗೊಡುತ್ತಲಿಲ್ಲ. ನೀನು ಇಷ್ಟು ಕಠೋರತೆ ವ್ಯಕ್ತಪಡಿಸಿದರೂ ಸಹ ಆಗಲೂ ಸಹಿತ ನಿನ್ನನ್ನೇ ನಂಬಿ ಕರೆಯುತ್ತಿದ್ದೇನೆ. ಇಂಥ ಗಂಭೀರ ಮೌನ ನಿನಗೆ ಸರಿಯೆ?'' ಎಂದು ಪರಿತಪಿಸುತ್ತಿದ್ದಾರೆ.

57. ಶರಣಾಗತಿ

ನೀ ಹುಟ್ಟಿಸಿದಲ್ಲಿ ಹುಟ್ಟಿ
ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ ?
ನೀವಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ?
ಅಕಟಕಟಾ ! ಎನ್ನವನೆನ್ನವನೆನ್ನಯ್ಯಾ, ಲಿಂಗದೇವಯ್ಯಾ - ಬ.ವ.ದೀ.55

ದೇವಾ, ಜೀವಾತ್ಮನಾದ ನಾನು ಸ್ವತಂತ್ರನಲ್ಲ. ನೀನು ಹುಟ್ಟಿಸಿದ ಕಾರಣ ನಾನು ಹುಟ್ಟಿದ್ದೇನೆ, ಎಂದು ಕೊಲ್ಲುತ್ತೀಯೋ ಅಂದು ಸಾಯುತ್ತೇನೆ. ಹುಟ್ಟು - ಸಾವು ಎರಡೂ ನನ್ನ ಕೈಲಿಲ್ಲ. ನೀನು ಯಾವ ಸ್ಥಿತಿಯಲ್ಲಿ ಇಡುತ್ತೀಯೋ ಆ ರೀತಿ ಇರುತ್ತೇನಲ್ಲದೆ ಬೇರೆ ರೀತಿ ಸಾಧ್ಯವೇ? ಆದ್ದರಿಂದ ಹುಲುಮಾನವನಾದ ನನ್ನನ್ನು ಕಾಡಬೇಡ. ನಿನ್ನವನು ಎಂದು ಇಂಬಿಟ್ಟುಕೋ.

58. ಹುಲುಗಿಳಿಯ ಮಾಡು

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ
ಸಲಹುತ್ತ, ಶಿವ ಶಿವಾ ಎಂದೋದಿಸಯ್ಯಾ
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು ಲಿಂಗದೇವಾ - ಬ.ವ.ದೀ.57

ಪ್ರಾಣಿಗಳು ವಾಸ ಮಾಡುವ ಕಾಡಿಗಿಂತಲೂ ನರರು ವಾಸ ಮಾಡುವ ಸಮಾಜ ಎಂಬ ಕಾಡು ಬಹಳ ಭಯಂಕರ. ಆದ್ದರಿಂದ ಲಿಂಗದೇವಾ, ನನ್ನನ್ನು ಒಂದು ಪುಟ್ಟಗಿಳಿಯನ್ನಾಗಿ ಮಾಡು. ಅದಕ್ಕೆ ಶಿವ ಶಿವಾ ಎಂದು ಪಠಿಸುವಂತಹ ಸಂಸ್ಕಾರ ನೀಡು. ಹೊರಗಿನ ಕ್ರೂರ ಪ್ರಾಣಿ-ಪಕ್ಷಿಗಳಿಂದ ರಕ್ಷಿಸಲು ಮಾಲಿಕನು ಗಿಳಿಗೆ ಪಂಜರದ ಆಶ್ರಯವನ್ನು ಕಲ್ಪಿಸುವಂತೆ ನನ್ನ ಜೀವಾತ್ಮನೆಂಬ ಗಿಳಿಯನ್ನು ರಕ್ಷಿಸಲು ಭಕ್ತಿ ಎಂಬ ಪಂಜರವನ್ನು ಒದಗಿಸು.

ಜಗತ್ತು ಎಷ್ಟೇ ಕೆಟ್ಟದಾಗಿರಲಿ, ಕ್ರೂರವಾಗಿರಲಿ. ಆದರ್ಶ ಜೀವಿ ಸಾಧಕನು ತನ್ನ ಅಂತರಂಗದಲ್ಲಿ ತನ್ನವೇ ಆದ ಆದರ್ಶಗಳನ್ನು ಬೆಳೆಸಿಕೊಳ್ಳಬಲ್ಲ, ಅವನ್ನು ಕಾಯ್ದುಕೊಳ್ಳಬಲ್ಲ ಎಂಬ ಸಂದೇಶ ಇಲ್ಲಿದೆ.

59. ಪ್ರತ್ಯಾಹಾರ

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ;
ನಿಮ್ಮ ಶರಣರ ಪಾದವಲ್ಲದೆ,
ಅನ್ಯ ವಿಷಯಕ್ಕೆಳಸದಂತೆ ಇರಿಸು, ಲಿಂಗದೇವಾ - ಬ.ವ.ದೀ.57

ಷಟಸ್ಥಲದ ಆರೋಹಣದಲ್ಲಿ ಮೂರು ಹಂತಗಳು ಬರುತ್ತವೆ. ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂಬುದಾಗಿ. ಮೊದಲನೆಯದು ಪದಾರ್ಥ ತ್ಯಾಗ, ಎರಡನೆಯದು ಪ್ರಸಾದ ಭೋಗ,

ಮೂರನೆಯದು ಲಿಂಗಯೋಗ. ಪದಾರ್ಥ ತ್ಯಾಗವೆಂದರೆ ಇಂದ್ರಿಯಗಳನ್ನು ಅವುಗಳ ಆಹಾರಗಳಿಂದ ದೂರವಿಡುವುದು. ನಂತರದ ಹಂತವೆಂದರೆ ಅವುಗಳಿಗೆ ದಿವ್ಯವಾದುದನ್ನೇ ಕೊಡುವುದು, ಆ ಮೇಲೆ ತ್ರಿಪುಟಿಯಳಿದು ಆ ದಿವ್ಯಾನಂದದಲ್ಲೇ ಮೈಮರೆಯುವುದು.

ಈ ವಚನದಲ್ಲಿ ಬರುವುದು ಪದಾರ್ಥ ತ್ಯಾಗದ ವಿಷಯ. ದೇವಸುತರಾದ ಬಸವಣ್ಣನವರು ಕರ್ತನಲ್ಲಿ ಬೇಡುತ್ತಾರೆ. ಈ ದೈವೀ ಮಾರ್ಗದಲ್ಲಿ ನಡೆಯುತ್ತಿರುವ ನನ್ನ ಕಾಲುಗಳು, ಇದಕ್ಕೆ ಹೊರತಾದ ಯಾವುದೇ ಕ್ರಿಯೆಗೆ ಎಳೆಸದೆ ಕುಂಟಾಗಿ ಬಿಡಲಿ. ನನ್ನ ಕಣ್ಣುಗಳು ದಿವ್ಯ ಜೀವನಕ್ಕೆ ಹೊರತಾದ ಅನ್ಯವನ್ನು ನೋಡುವಾಗ ಕುರುಡಾಗಿ ಬಿಡಲಿ. ನಿನ್ನ ನಾಮಾಮೃತ ಹೊರತಾಗಿ ಕೇಳಲು ಹೋಗುವ ಕಿವಿಗಳು ಕಿವುಡಾಗಿ ಬಿಡಲಿ. ನೀನು ಮತ್ತು ನಿನ್ನ ಶರಣರು - ಇವಕ್ಕೆ ಹೊರತುಪಡಿಸಿ ಯಾವುದೇ ವಿಷಯಕ್ಕೆ ನನ್ನ ಇಂದ್ರಿಯಗಳು ಹರಿಯದಂತೆ ನನ್ನನ್ನು ಇರಿಸು, ಲಿಂಗದೇವ.

60. ಪೂರ್ಣ ಶರಣಾಗತಿ

ಎನ್ನ ವಾಮಕ್ಷೇಮ ನಿಮ್ಮದಯ್ಯ
ಎನ್ನ ಹಾನಿವೃದ್ಧಿ ನಿಮ್ಮದಯ್ಯಾ;
ಎನ್ನ ಮಾನಾಪಮಾನ ನಿಮ್ಮದಯ್ಯಾ;
ಬಳ್ಳಿಗೆ ಕಾಯಿ ದಿಮ್ಮಿತ್ತೆ ಲಿಂಗದೇವಾ ? - ಬ.ವ.ದೀ.58

ನನ್ನ ಕೆಡುಕಾಗಲಿ, ಒಳ್ಳಿತಾಗಲಿ ದೇವಾ, ನಿನಗೆ ಸೇರಿದ್ದು. ನನ್ನ ಜೀವನದಲ್ಲಿ ಹಿನ್ನಡೆಯಾಗಲಿ ಮುನ್ನಡೆಯಾಗಲಿ ನಿನಗೇ ಸೇರಿದ್ದು. ನನಗೆ ಒದಗುವ ಗೌರವವಾಗಲಿ ಅಪಮಾನವಾಗಲಿ ನಿನಗೇ ಸೇರಿದ್ದು. ಬಳ್ಳಿಗೆ ಹೇಗೆ ಕಾಯಿ ಭಾರವಾಗುವುದಿಲ್ಲವೋ ಹಾಗೆ ನಿನಗೆ ನಾನು ಭಾರವಲ್ಲ. ಆದ್ದರಿಂದ ನನ್ನ ರಕ್ಷಣೆಯ ಹೊಣೆ ನಿನ್ನದೇ ಆಗಿದೆ.

ಸಾಧಕನ ಜೀವನದಲ್ಲಿ ಶರಣಾಗತಿ (Surrender) ಎಂಬುವುದು ಬಹಳ ಮುಖ್ಯ. ತನ್ನನ್ನು ತಾನು ದೇವನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವುದು ಮತ್ತು ಅರ್ಪಿಸಿಕೊಳ್ಳುವುದು ಇಲ್ಲಿ ಪ್ರಧಾನವಾಗುತ್ತದೆ. ಜೀವನದಲ್ಲಿ ವಿಪತ್ತೇ ಬರಲಿ ಸಂಪತ್ತೇ ಬರಲಿ ಅದು ದೇವನ ಪ್ರಸಾದ; ಮಾನ ಅಪಮಾನ ಸಹ ದೇವನ ಪ್ರಸಾದವೇ ಎಂದು ಚಿಂತೆ ಮಾಡದೆ, ಇದು ನನ್ನ ಒಳ್ಳೆಯದಕ್ಕೇ ಬಂದಿರುವಂಥದು ಎಂದು ಅನುಭವಿಸಬೇಕು.

61. ಶರಣರ ಸಂಗ ರಕ್ಷಾ ಕವಚ

ಸಟೆಯಿಲ್ಲದಂತೆ , ಪ್ರಪಂಚುವಿಲ್ಲದಂತೆ, ವೈಶಿಕವಿಲ್ಲದಂತೆ
ನಡೆಸಯ್ಯಾ ಲಿಂಗ ತಂದೆ.
ಒಂದು ನಿಮಿಷವಗಲದೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ
ಬೇರೆ ಮತ್ತೆ ಅನ್ಯವ ತೋರದಿರಯ್ಯಾ;
ಹೊಲುಬುಗೆಟ್ಟೇನಯ್ಯಾ , ಲಿಂಗದೇವಾ !

ಒಬ್ಬ ವ್ಯಕ್ತಿ ಆದರ್ಶವಂತನಾಗಿ ಬಾಳಬೇಕೆಂದರೂ ಜಗತ್ತು ಬಿಡುವುದಿಲ್ಲ. ತಮ್ಮ ಹಿತಾಸಕ್ತಿಗಾಗಿ ತಾವು ಸುಳ್ಳುಹೇಳುವುದಲ್ಲದೆ ಜನರು ಆದರ್ಶವಂತರನ್ನೂ ಅವರ ಅಂತರಾತ್ಮಕ್ಕೆ ವಿರುದ್ಧವಾಗಿ ಸುಳ್ಳು ಹೇಳಲು ಒತ್ತಡ ತರುತ್ತಾರೆ. ಅದಕ್ಕಾಗಿ ಧರ್ಮಪಿತ ಬಸವಣ್ಣನವರು "ಸುಳ್ಳು ಇಲ್ಲದಂತೆ, ಲೌಕಿಕತೆ ಇಲ್ಲದಂತೆ, ವೈಶಿಕ ಸ್ವಭಾವವಿಲ್ಲದಂತೆ ನನ್ನನ್ನು ನಡೆಸು" ಎಂದು ದೇವರಲ್ಲಿ ಬೇಡುತ್ತಾರೆ. ಇಂದಿನಂತೆ ಅಂದೂ ಸಹ ಭ್ರಷ್ಟಾಚಾರವಿತ್ತು. ಅಂದು ಮಾನ ಮರ್ಯಾದೆಗೆ ಅಂಜಿ ಕದ್ದು ಮುಚ್ಚಿ ಮಾಡುತ್ತಿದ್ದರು. ಇಂದು ರಾಜಾರೋಷವಾಗಿ, ನಿರ್ಭಯವಾಗಿ ಮಾಡುತ್ತಾರೆ. ಸುಳ್ಳು ಹೇಳದಿದ್ದರೆ, ಲಂಚ ತೆಗೆದು ಕೊಳ್ಳದಿದ್ದರೆ "ನೀನೂ ತಿನ್ನುವುದಿಲ್ಲ ನಮಗೂ ಕೊಡುವುದಿಲ್ಲ" ಎಂದು ಕಿರುಕುಳ ಕೊಡುತ್ತಾರೆ. ಮೇಲಧಿಕಾರಿಗಳು, ಕೈಕೆಳಗಿನವರು ಉಭಯತರೂ ತೊಂದರೆ ನೀಡುತ್ತಾರೆ. ಅವರ ಗುರಿಯೆಲ್ಲವೂ ತಮ್ಮ ಪ್ರಪಂಚವನ್ನು ಅರ್ಥಾತ್ ಸಂಸಾರವನ್ನು ಸಾಕುವುದೇ ಆಗಿರುತ್ತದೆ. ಯಾವ ಬೆಲೆ ತೆತ್ತಾದರೂ, ಸಮಾಜ - ರಾಷ್ಟ್ರದ ಹಿತವನ್ನು ಕಡೆಗಣಿಸಿಯಾದರೂ ತಮ್ಮ ಹೆಂಡತಿ, ಮಕ್ಕಳಿಗೆ ಆಸ್ತಿ ಮಾಡಬೇಕು ಎಂದು ಹಾತೊರೆಯುತ್ತಾರೆ. ಅದಕ್ಕಾಗಿ ವೈಶಿಕ ಸ್ವಭಾವ ಬೆಳೆಸಿಕೊಳ್ಳುತ್ತಾರೆ. ಪತಿವ್ರತೆ ಒಬ್ಬ ಪತಿಯಲ್ಲಿ ನಿಷ್ಠೆಯನ್ನು ಹೊಂದಿದ್ದರೆ ವೇಶ್ಯೆ ಹೊಟ್ಟೆಪಾಡಿಗಾಗಿ ಹಲವರ ಸಹವಾಸ ಮಾಡುತ್ತಾಳೆ. ಗಂಡನ ಕಷ್ಟ -ಸುಖದಲ್ಲಿ ಪತ್ನಿಯು ಸಹಭಾಗಿಯಾಗುತ್ತಾಳೆ. ವೇಶ್ಯೆ ಹಣ ಕಿತುಕೊಳ್ಳುವಳೇ ವಿನಾ ಆ ವ್ಯಕ್ತಿಯ ಕಷ್ಟ - ಸುಖದಲ್ಲಿ ಪಾಲ್ಗೊಳ್ಳುವುದಿಲ್ಲ. ಆದೇ ರೀತಿ ಕೆಲವರು ಯಾವ ಒಂದು ಆದರ್ಶಕ್ಕೂ

ಅಂಟಿಕೊಳ್ಳದೆ ತಮ್ಮ ನಿಷ್ಠೆಯನ್ನು ಬದಲಾಯಿಸುತ್ತಾರೆ. ಇಂದಿನ ಪಕ್ಷಾಂತರವೇ ಇದಕ್ಕೊಂದು ಜ್ವಲಂತ ಉದಾಹರಣೆ.

ಇಂಥ ದೋಷ - ದೌರ್ಬಲ್ಯಗಳು ಇಲ್ಲದಂತೆ ನನ್ನನ್ನು ನಡೆಸು. ಈ ಆದರ್ಶಗಳನ್ನು ಕಾಯ್ದು ಕೊಳ್ಳಬೇಕಾದರೆ ಇರುವ ಉಪಾಯವೆಂದರೆ ಸತತವಾಗಿ ಶರಣರೊಡನೆ ಒಡನಾಟ ಮಾಡುವುದು. ಒಂದು ನಿಮಿಷವೂ ಅಗಲದಂತೆ ಶರಣರ ಸಂಗದಲ್ಲಿ ಇರುವುದು. "ಬೇರೆ ಇನ್ನೇನೂ ತೋರಬೇಡ. ಆದರ್ಶ ರಹಿತರಾದ ಜನರ ಜೊತೆಗೆ ಒಡನಾಡಿದರೆ ನಾನೂ ದಾರಿ ತಪ್ಪಿಬಿಟ್ಟೇನು." ಎಂದು ಆತಂಕ ಪಡುತ್ತಾರೆ ಬಸವಣ್ಣನವರು. ಸಮಾಜವು ಕೆಟ್ಟು ಹೋಗಿರುತ್ತದೆ ನಿಜ. ಆದರೆ ಅದರ ಮಧ್ಯದಿಂದಲೇ ಒಂದು ಉತ್ತಮ, ಮೌಲ್ಯಯುತ, ಆದರ್ಶ ಸಮಾಜವನ್ನು ಕಟ್ಟಬೇಕು. ಅದುವೆ ಸಟೆ, ಪ್ರಪಂಚು, ವೈಶಿಕವಿಲ್ಲದ ಶರಣ ಸಮಾಜ - ಕಲ್ಯಾಣ ರಾಜ್ಯ.

62. ವಿಶ್ವಕುಟುಂಬತ್ವ

ಇವನಾರವ ಇವನಾರವ ಇವನಾರವನೆಂದೆನಿದಿರಯ್ಯಾ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ -ಬ.ವ.ದೀ. 60

ಅತ್ಯಂತ ಜನಪ್ರಿಯವಾದ ಒಂದು ವಚನವಿದು. ಇದಕ್ಕೆ ಬಗೆಬಗೆಯ ಮತ್ತು ಭಯಂಕರವಾದ ವ್ಯಾಖ್ಯಾನಗಳಿವೆ. 1.ಬಸವಣ್ಣನವರು ದಲಿತರ ಉದ್ಧಾರಕ್ಕೆ ಯತ್ನಿಸಿದರು. ಅಪ್ಪಾ, ಬೊಪ್ಪಾ ಎಂದು ಅವರ ಬಳಿಗೆ ಸಾರಿದರು. ಆದರೆ ದಲಿತರು ಇವರನ್ನು ನಂಬಲಿಲ್ಲ. ಅದಕ್ಕಾಗಿ ದೈನ್ಯತೆಯಿಂದ ಬೇಡಿ ಕೊಂಡರು, ಇವನು ಯಾರವನು ? ಎಂದು ಸಂದೇಹಿಸಿ ದೂರಮಾಡಬೇಡಿರಿ. ಇವನು ನಮ್ಮವನು ಎಂದು ಇಂಬಿಟ್ಟುಕೊಳ್ಳಿ. ನಿಮ್ಮ ಮನೆಯ ಮಗ ಎಂದು ಭಾವಿಸಿರಿ. 2.ಇನ್ನು ಪಂಚಾಚಾರ್ಯರ ವ್ಯಾಖ್ಯಾನವೆಂದರೆ, ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಬಸವಣ್ಣನವರು ವೀರಶೈವ ಮತ ಸ್ವೀಕರಿಸಿದರು. ಆಗ ವೀರಶೈವರು ನಂಬಲಿಲ್ಲ. ಅದಕ್ಕಾಗಿ ದೈನ್ಯತೆಯಿಂದ ಬೇಡಿಕೊಂಡರು ಎಂಬುದಾಗಿ.

3. ಇನ್ನು ಕೆಲವರು ಹೇಳುತ್ತಾರೆ, "ಇವನಾರವ" ಅಲ್ಲ "ಇವ ಹಾರುವ" ಎಂದಿರಬೇಕು "ಇವ ಹಾರುವ" ಎಂದು ನನ್ನನ್ನು ದೂರಮಾಡದೆ ಇವ ನಮ್ಮವ ಎಂದು ಇಂಬಿಟ್ಟುಕೊಳ್ಳಿ ಎಂದು ಬೇಡಿದ್ದಾರೆ ಎಂಬುದಾಗಿ.

ಇದು ವಿಶ್ವಭ್ರಾತೃತ್ವ ವಿಶ್ವ ಕುಟುಂಬತ್ವ ಬೋಧಿಸುವ ಒಂದು ವಚನ. ಮಾನವರನ್ನು ವಿಂಗಡಿಸುವ ಭೇದಗಳೆಂದರೆ ಜಾತಿ (ವರ್ಣ), ವರ್ಗ ಮತ್ತು ಅಂತಸ್ತು. ಇವನು ಯಾರವ? ಅರ್ಥಾತ್ ಇವನು ಯಾವ ಜಾತಿಯವನು ? ಇವನು ಯಾವ ಉದ್ಯೋಗದವನು ? ಯಾವ ಅಂತಸ್ತಿನವನು ? ಈ ಮೂರು ಅಂಶಗಳ ಆಧಾರದ ಮೇಲೆ ಭೇದ ಮಾಡದೆ ಜಾತಿ ಯಾವುದೇ ಇರಲಿ, ಯಾವ ಉದ್ಯೋಗವನ್ನೇ ಮಾಡಲಿ ಸಾಮಾಜಿಕವಾಗಿ ಯಾವ ಅಂತಸ್ತಿನಲ್ಲೇ ಇರಲಿ ಇವನು ನಮ್ಮವನು ಎಂದು ಆದರಿಸುವ ಮನೋಭಾವ ಬೆಳೆಯಬೇಕು. ಈ ಜಗತ್ತು ದೇವರ ಮನೆ. ಈ ಮಹಾಮನೆಯ ಮಗ ಎನಿಸಿಕೊಳ್ಳಬೇಕಾದರೆ ಎಲ್ಲರನ್ನೂ ಆದರಿಸಲು, ಪ್ರೀತಿಸಲು, ಗೌರವಿಸಲು ಕಲಿಯಬೇಕು. "ಈ ಜಗತ್ತೆಂಬ ಮಹಾಮನೆಯ ಮಗ ನಾನು ಎಂದೆನಿಸು ದೇವಾ" ಎಂದು ಸೃಷ್ಟಿಕರ್ತನಲ್ಲಿ ಬೇಡಿ ಕೊಂಡಿದ್ದಾರೆ ಗುರು ಬಸವಣ್ಣನವರು.

63. ಕಾಡುವ ಲಿಂಗದೇವ

ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ, ಇಳಿಯಬಿಟ್ಟು
ನೀವು ನಗುವಿರಯ್ಯಾ
ಶಿವ ಬಟ್ಟೆಯಲೆನ್ನನಿರಿಸಯ್ಯಾ ಹರನೆ;
ಹೊಲಬುಗೆಟ್ಟೆನು ಬಟ್ಟೆಯ ತೋರಯ್ಯಾ!
ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ;
ಲಿಂಗದೇವನೆನ್ನ ಕಾಡಿಹನಯ್ಯಾ ! - ಬ.ವ.ದೀ.61

"ದೇವರೇ , ಏನು ನಿನ್ನ ಮೋಜಿನ ಆಟ ! ಹುಟ್ಟು ಎಂದು ಲೋಕದಲ್ಲಿ ಹುಟ್ಟಿಸಿ, ಈ ಜಗತ್ತಿನಲ್ಲಿ ಇಳಿಯಬಿಟ್ಟು ಜೀವಾತ್ಮನಾದ ನಾನು ಪಡುವ ಸಂಕಟ ನೋಡಿ ನಗುವೆಯಲ್ಲಾ! ಇದು ನಿನಗೆ ತರವೆ? ನನ್ನನ್ನು ಶಿವಪಥದಲ್ಲಿ ಇರಿಸು. ನನಗೆ ದಾರಿ ತಿಳಿಯುತ್ತಲಿಲ್ಲ, ಮುಂದಿನ ದಾರಿ ನಿಚ್ಚಳಗೊಳಿಸು. ನೀನು ಹೀಗೆಯೇ ನನ್ನನ್ನು ಕಾಡುತ್ತಲಿದ್ದರೆ ನಾನು ಹುಯ್ಯಲಿಟ್ಟು ಶರಣ ಗಣಂಗಳಿಗೆ ದೂರು ಕೊಡುತ್ತೇನೆ. ಲಿಂಗದೇವನು ನನ್ನನ್ನು ಕಾಡುತ್ತಲಿದ್ದಾನೆ. ಅವನ ಮೇಲೆ ಕ್ರಮ ಕೈಗೊಳ್ಳಿರಿ. ನೀವಾದರೂ ನನ್ನ ಸಂಕಷ್ಟ ತಪ್ಪಿಸಿರಿ." ಎಂದು ಶಿವಗಣಂಗಳ ಮುಂದೆ ಹುಯ್ಯಲಿಡುತ್ತೇನೆ.

☹ ಸಮಸ್ಯೆ ? - ಸಮಾಧಾನ ! ☺

ಅಂಬರೀಶ್, ರಾ.ಬ.ದಳ ಕಾರ್ಯಕರ್ತ, ಬೆಳಗಾವಿ

? ಬೆಳಗಾವಿಯಲ್ಲಿ ದಿ.23-8-2008ರಂದು ಒಂದು ಗೋಷ್ಠಿ ನಡೆಯಿತು. ಪೂಜ್ಯ ಸಿದ್ಧರಾಮ ಸ್ವಾಮಿಗಳು, ನಾಗನೂರು ಮಠ ಇವರ ಸನ್ನಿಧಿಯಲ್ಲಿ ನಡೆದ ಸಭೆಯಲ್ಲಿ ಶ್ರೀ. ಎಂ.ಎಂ.ಕಲಬುರ್ಗಿ ಮುಖ್ಯ ಉಪನ್ಯಾಸಕರು. ವಚನಾಂಕಿತ ಬದಲಾವಣೆ ಕುರಿತು ನಾನಾ ಬಗೆಯ ಚರ್ಚೆ ನಡೆಯಿತು. ಒಂದು ಸಲಹೆ ಎಂದರೆ, ಮಾತೆ ಮಹಾದೇವಿಯವರ ಅಭಿಮಾನಿಗಳು ಅರ್ಥಾತ್ ಲಿಂಗದೇವ ವಚನಾಂಕಿತ ಬಳಸುವವರನ್ನು ದೈಹಿಕವಾಗಿ ಶಿಕ್ಷಿಸಬೇಕು ಎಂಬುದು. ಈ ಬಗ್ಗೆ ನಿಮ್ಮ ಅಭಿಪ್ರಾಯ ?

★ ನಮ್ಮ ಶರಣರು ತಿಳಿದಿದ್ದಾರೆ,

ನಚ್ಚಿದೆನೆಂದರೆ ಮೆಚ್ಚಿದೆನೆಂದರೆ ಸಲೆ ಮಾರು ಹೋದೆನೆಂದರೆ
ತನುವನಲ್ಲಾಡಿಸಿ ನೋಡುವೆ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇವೆಲ್ಲಕ್ಕೆ ಅಂಜದಿದ್ದರೆ ಭಕ್ತ ಕಂಪಿತ ನಮ್ಮ ಲಿಂಗದೇವ !

ಏಕದೇವ ನಿಷ್ಠೆಯನ್ನು ಅಳವಡಿಸಿಕೊಂಡು ಲಿಂಗದೇವನ ಅಪ್ಪಟ ಭಕ್ತರಾಗಬೇಕು ಎನ್ನುವವರ ತನು ಮನ ಧನಗಳನ್ನು ದೇವನು ಅಲ್ಲಾಡಿಸಿ ನೋಡುವನು. ಇವೆಲ್ಲಕ್ಕೆ ಅಂಜದಿದ್ದರೆ ಅವನೇ ಸೋಲುವನು.

ದೈಹಿಕ ಶಿಕ್ಷೆಗಾಗಲಿ, ನಿಂದೆಗಾಗಲಿ ನಮ್ಮ ಶರಣರು ಅಂಜುವವರಲ್ಲ. ಅಂಜು ಬುರುಕರು ಈ 12 ವರ್ಷಗಳ (1996 - 2008) ಅವಧಿಯಲ್ಲಿ ರಾಷ್ಟ್ರೀಯ ಬಸವ ದಳದಿಂದ ಹೊರಗಾದರೂ ಹೋಗಿದ್ದಾರೆ ಇಲ್ಲವೇ ವಿರೋಧಿಗಳಾಗಿದ್ದಾರೆ. ಈಗ ಉಳಿದಿರುವವರು ಗಟ್ಟಿಕಾಳುಗಳು ಮಾತ್ರ. ನೋಡೋಣ; ಕಲಬುರ್ಗಿಯವರು ಯಾವ ರೀತಿ ನಿಮ್ಮನ್ನು ಶಿಕ್ಷಿಸಲು ಆದೇಶ ನೀಡುವರು ಎಂಬುದನ್ನು.

ಎಸ್.ಎಸ್.ಹಿರೇಮಠ, ವಕೀಲರು, ಬೆಳಗಾವಿ (15-8-2008)

? ಪಂಚಾಚಾರ್ಯರು - ವೀರಶೈವರು, ಇಷ್ಟಲಿಂಗ ಧಾರಣೆ ಮಾಡುವುದಿಲ್ಲ. ಲಿಂಗಾಯತ (ಬಸವ ಧರ್ಮ)ರುಗಳಲ್ಲಿ ಮಾತ್ರ ಧಾರಣೆಯಿದೆ. ಇಷ್ಟಲಿಂಗ ಧಾರಣೆ ಯಾರಿಂದ, ಯಾವ ಕಾಲದಲ್ಲಿ ಪ್ರಾರಂಭವಾಯಿತು ?

★ ಬಹುಶಃ ನೀವು ಕಲ್ಯಾಣ ಕಿರಣದ ಹೊಸ ಓದುಗರು ಅನ್ನಿಸುತ್ತದೆ. ಈ ವಿಷಯ ಬಹಳಷ್ಟು ಸಲ ಪ್ರಸ್ತಾಪಿತವಾಗಿದೆ. ವೀರಶೈವ ಪಂಥದವರು ತಮಿಳುನಾಡು, ಕೇರಳ, ಆಂಧ್ರದಲ್ಲಿದ್ದಾರೆ. ಅವರು ಇಷ್ಟಲಿಂಗಧಾರಣೆ ಮಾಡುವುದಿಲ್ಲ. ಕರ್ನಾಟಕದ ಪಂಚಾಚಾರ್ಯರು ಸಹ ವೀರಶೈವರಲ್ಲ, ಲಿಂಗಾಯತರು. ಇಷ್ಟಲಿಂಗಧಾರಣೆ ಮಾಡುವವರೆಲ್ಲರೂ ಲಿಂಗಾಯತರೆ ! ತಪ್ಪು ತಪ್ಪಾಗಿ ಲಿಂಗಾಯತರಲ್ಲಿ ಕೆಲವರು ತಮ್ಮನ್ನು ವೀರಶೈವರೆಂದು ಕೃತಕವಾಗಿ ಕರೆದುಕೊಂಡಿದ್ದಾರೆ. ಗೋಳಾಕಾರದ ಇಷ್ಟಲಿಂಗದ ಪರಿಕಲ್ಪನೆ ಕೊಟ್ಟವರು ಗುರು ಬಸವಣ್ಣನವರು. ಇದರ ಆಧಾರದ ಮೇಲೆ ಹುಟ್ಟಿದ್ದು ಲಿಂಗಾಯತ ಧರ್ಮ. ವಚನ ಸಾಹಿತ್ಯ ಇದನ್ನು ಸ್ಪಷ್ಟವಾಗಿ ಹೇಳಿದೆ.

ಲೀಲಾವತಿ, ಬೆಂಗಳೂರು

? ನಳಿನಿ ಮಹಾದೇವ ಸ್ವಾಮಿ ಎನ್ನುವವರೊಬ್ಬರು ಮಾತೆ ಮಹಾದೇವಿಯವರು ಭಾಗವಹಿಸುವ ಸಭೆಯಲ್ಲಿ ಕಪಾಳ ಮೋಕ್ಷ ಚಳುವಳಿ ಮಾಡಲಾಗುವುದು ಎಂದು ಹೇಳಿದ್ದಾರೆ. ಎಂಥಾ ವಿಚಿತ್ರ !

★ ಒಂದೊಂದು ಸಂದರ್ಭ ಬಳಸಿಕೊಂಡು ಕೆಲವರು ಪ್ರಚಾರ ಪಡೆಯಬೇಕು ಎನ್ನುವ ಚಪಲ ಹೊಂದಿರುತ್ತಾರೆ, ಕಪಾಳ ಮೋಕ್ಷ ಮಾಡಿಕೊಳ್ಳಲಿ ಬಿಡಿ, ಅವರ ಕೆನ್ನೆ ಅವರ ಕೈ ತಡೆಯುವವರಿನ್ನಾರು?

ಶಿವಮೂರ್ತಿ ಸಿ.ವಿ.ಚಂದಕವಾಡಿ, ಚಾಮರಾಜ ನಗರ ತಾಲ್ಲೋಕು

? ಶರಣೆ ಅಕ್ಕಮ್ಮನವರ ಒಂದು ವಚನ ಹೀಗಿದೆ :

ಪಂಚಾಚಾರವ ಧರಿಸಿದ ಶರೀರಕ್ಕೆ
ಅಷ್ಟೋತ್ತರ ಶತವ್ಯಾಧಿ ಬಂದಿತ್ತೆಂದು ಕಲ್ಪಿಸಬಹುದೆ?
ಪಾದ ತೀರ್ಥ ಪ್ರಸಾದವೆಂದು ನೈಷ್ಠಿಕದಲ್ಲಿ ಕೊಂಬ ಜಿಹ್ವೆ
ಔಷಧಿ ಕಷಾಯ ಕೊಂಡಡೆ ಪಂಚಾಚಾರಕ್ಕೆ ದೂರ;

ಪಾದೋದಕ ಪ್ರಸಾದವಿಲ್ಲ, ಇಹಪರಕ್ಕೆ ಸಲ್ಲ,
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗ ಅವರನೊಲ್ಲ

ಈ ವಚನದ ಪ್ರಕಾರ ಅನಾರೋಗ್ಯ ಹೊಂದಿದ ಶರಣ ಯಾವುದೇ ಚಿಕಿತ್ಸೆ ಪಡೆಯಬಾರದು. ತೀರ್ಥ ಪ್ರಸಾದ ಸ್ವೀಕರಿಸುವ ಜಿಹ್ವೆಯಲ್ಲಿ ಔಷಧಿ ಕಷಾಯ ಕೊಳ್ಳಬಾರದು. ಇದು ಸಾಧ್ಯವೆ?

★ ಆದಿ ಶರಣರು ಬೋಧಿಸಿದ ತತ್ತ್ವದಂತೆ ನಡೆದರೆ ವ್ಯಾಧಿಗಳು ಬರುವುದೇ ಇಲ್ಲ. ಭಾರತೀಯ ಯೋಗ ವಿಜ್ಞಾನ, ನಿಸರ್ಗ ಚಿಕಿತ್ಸೆ, ಧ್ಯಾನ ಪದ್ಧತಿ ಅಳವಡಿಸಿದಾಗ ಕಾಯಿಲೆಗಳು ಬರುವುದೇ ಇಲ್ಲ, ಬಂದರೂ ತಮ್ಮಿಂದ ತಾವೇ ನಿವಾರಣೆಯಾಗುತ್ತವೆ. ಆದರೆ ಈಗಿನ ಪರಿಸರ, ಕಾಲಮಾನ ಬೇರೆಯೇ ಇವೆ. ಗಾಳಿ, ನೀರು, ನೆಲ, ಧಾನ್ಯ ಎಲ್ಲವೂ ಕಲುಷಿತ. ಜೊತೆಗೆ ಒತ್ತಡದ ಬದುಕು. ಕೆಲವರು ಬೇರೆ ಏನೂ ಕೆಲಸ ಮಾಡದೆ ಆರೋಗ್ಯ ಕಾಯ್ದುಕೊಳ್ಳಲಿಕ್ಕೆ ಕ್ರಮಬದ್ಧ ಜೀವನ ನಡೆಸುತ್ತಾರೆ. ಬ್ರಹ್ಮಾಂಡ ಪ್ರಳಯವಾದರೂ ಚಿಂತೆಯಿಲ್ಲ ಸಮಯಕ್ಕೆ ಸರಿಯಾಗಿ ಊಟ -ನಿದ್ರೆ ಮಾಡುತ್ತಾರೆ. ಕಾರ್ಯ ತತ್ಪರರಾದವರಿಗೆ ಇದು ಸಾಧ್ಯವಾಗದು. ಆದ್ದರಿಂದ ಆರೋಗ್ಯ ರಕ್ಷಣೆಗಾಗಿ ಔಷಧೋಪಚಾರ ಮಾಡಿಕೊಂಡರೆ ತಪ್ಪೇನಿಲ್ಲ. ಔಷಧಿ -ಕಷಾಯವನ್ನು ಲಿಂಗಾರ್ಪಿತವ ಮಾಡಿಯೇ ಉಪಯೋಗಿಸಿ ಬಿಟ್ಟರಾಯಿತು.

ಆದಿ ಶರಣರ ಕೆಲವು ವಿಚಾರಗಳಿಗೆ ತಿದ್ದುಪಡಿ ಅಗತ್ಯವಿದೆ. ಆಚಾರವನ್ನು ಕಾಯ್ದುಕೊಳ್ಳುವದಕ್ಕೆ ಪ್ರಾಣಕೊಟ್ಟರೂ ಪರವಾಗಿಲ್ಲ ಎನ್ನುತ್ತಾಳೆ ಅಕ್ಕಮ್ಮ. ಆದರೆ ಚನ್ನಬಸವಣ್ಣನವರು ಹೇಳುತ್ತಾರೆ, "ಇಷ್ಟಲಿಂಗ ಬಿದ್ದರೆ, ಕಳೆದು ಹೋದರೆ ಕೆಲವರು ಪ್ರಾಣಬಿಡಬೇಕೆನ್ನುತ್ತಾರೆ. ಇದು ತಪ್ಪು. ಜೀವ ಅಮೂಲ್ಯ. ಗುರುವಿನಿಂದ ಬೇರೊಂದು ಇಷ್ಟಲಿಂಗ ಪಡೆಯಬೇಕು." ಎಂದು.

ಮಲ್ಲೇಶಪ್ಪ ಪಾಟೀಲ, ಬೆಂಗಳೂರು

? ವೀರಶೈವ ಮಹಾಸಭೆಯವರು ಭೀಮಣ್ಣ ಖಂಡ್ರೆ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿ ಕೆಲವು ನಿರ್ಣಯ ತೆಗೆದು ಕೊಂಡಿದ್ದಾರೆ. ಮಾತಾಜಿಯವರ ಕಾರ್ಯಕ್ರಮಕ್ಕೆ ರಾಜಕೀಯ ನೇತಾರರಾಗಲಿ, ವೀರಶೈವ ಮಹಾಸಭೆಯವರಾಗಲೀ ಹೋಗಬಾರದು. ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬೇಕು. ಇದಕ್ಕೆ ನಿಮ್ಮ ಪ್ರತಿಕ್ರಿಯೆ ?

★ ನಮ್ಮ ಯಾವ ಕಾರ್ಯಕ್ರಮಗಳೂ ರಾಜಕೀಯ ವ್ಯಕ್ತಿಗಳ ಮೇಲೆ ಅವಲಂಬಿತವಾಗಿ ಇರುವುದಿಲ್ಲ. ಜನರು ಜ್ಞಾನಕ್ಕಾಗಿ ಬರುತ್ತಾರೆ. ಬಸವ ಪಂಚಮಿ ಕಾರ್ಯಕ್ರಮಕ್ಕೆ ನಾವು ಬಹಳ ಜನ ಮಂತ್ರಿಗಳನ್ನು ಕರೆದಿದ್ದೆವು. ಅವರನ್ನು ಬರಗೊಡಲಿಲ್ಲ. ನಮ್ಮ ಕಾರ್ಯಕ್ರಮ ಅತ್ಯಂತ ಅದ್ದೂರಿಯಾಗಿ ಆಯಿತು. ಬರದೆ ಇದ್ದವರಿಗೆ ಪುಣ್ಯವಿಲ್ಲ ಅಷ್ಟೆ ಎಂದುಕೊಂಡರು ಜನರು. ಇನ್ನು ವೀರಶೈವ ಮಹಾ ಸಭೆಯವರನ್ನಂತೂ ನಾವು ಕರೆಯುವುದಿಲ್ಲ. ಏಕೆಂದರೆ ಅವರ ನಾಲಿಗೆ ಮೇಲೆ ವೀರಶೈವ ಪದ ಕುಳಿತು ನಾಲಿಗೆ ಕಿಲುಬು ಗಟ್ಟಿದೆ. ಅವರು ಪುಸಕ್ಕನೆ ವೀರಶೈವ ಎನ್ನುತ್ತಿದ್ದಂತೆಯೇ ನಮ್ಮ ಶರಣರು ಸಭೆಯಲ್ಲಿ ಎದ್ದು, ನಾವು ಲಿಂಗಾಯತರು ವೀರಶೈವ ಬಳಸಬೇಡಿ ಎನ್ನುತ್ತಾರೆ. ಹೀಗಾಗಿಯೇ ನಾಲಿಗೆಗೆ ವೀರಶೈವ ಸಂಸ್ಕಾರ ಆಗಿರುವ ಸಾಹಿತಿಗಳನ್ನು, ಭಾಷಣಕಾರರನ್ನು ಕರೆಯುವುದನ್ನೇ ಬಿಟ್ಟಿದ್ದೇವೆ.

ಇನ್ನು ಮೊಕದ್ದಮೆ ಹೂಡಲಿ ಬಿಡಿರಿ. 1973ರಲ್ಲಿ ಒಮ್ಮೆ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಮಲ್ಲಾರಾಧ್ಯರು ನಮಗೆ ಲೀಗಲ್ ನೋಟೀಸ್ ಕೊಟ್ಟು, ಹೆಣ್ಣು ಮಕ್ಕಳು -ಗುರು, ಜಗದ್ಗುರುವಾಗಲು ಬರದು. ನೀವು ಜಗದ್ಗುರು ಎಂದು ಬರೆದುಕೊಳ್ಳುತ್ತೀರಿ ನಿಮ್ಮ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಎಂದು ತಿಳಿಸಿದರು. ಇದಕ್ಕೆ ನಾನೇ ನೇರವಾಗಿ ಉತ್ತರ ಬರೆದೆ. ವೀರಶೈವವು ಆಗಮ ಆಧಾರಿತ ಪಂಥ ಅದರಲ್ಲಿ ಭೇದಗಳಿವೆ. ಹೀಗಾಗಿ ಅದರ ಪ್ರಕಾರ ಮಹಿಳೆ ಗುರುವಾಗಲಾರಳು. ಲಿಂಗಾಯತವು ವಚನ ಆಧಾರಿತ ಸ್ವತಂತ್ರ ಧರ್ಮ. ಇಲ್ಲಿ ಮಹಿಳೆ ಗುರು -ಜಗದ್ಗುರುವಾಗಬಲ್ಲಳು.

ಈಗೊಮ್ಮೆ ನ್ಯಾಯಾಲಯಕ್ಕೆ ವೀರಶೈವ ಮಹಾಸಭೆ ಹೋಗಲು ಬಯಸಿದರೆ ಹೋಗಲು ಬಿಡಿರಿ.

ರತ್ನಮ್ಮ ಮಹಾಲಿಂಗಪ್ಪ, ಭದ್ರಾವತಿ

? ರವಿ ಬೆಳಗೆರೆ ಸುವರ್ಣ ಚಾನೆಲ್‌ದಲ್ಲಿ ಮಾತೆ ಎಂಬ ಪವಿತ್ರ ಪದವನ್ನು ಮಾತು ಎಂಬರ್ಥದಲ್ಲಿ ನೀವು ಕೊಡುವ ತಾತ್ವಿಕ ವಿವರಣೆಯನ್ನು ರೈಲು ಬಿಡ್ತಾರೆ ಎಂದು ವ್ಯಂಗ್ಯವಾಗಿ ಹೇಳಿದ್ದು ಕೇಳಿ ಮನಸಿಗೆ ನೋವೆನಿಸಿತು.

★ ರವಿ ಬೆಳಗೆರೆಯವರ ಲೇಖನಿ, ನಾಲಿಗೆ ಪಡೆದಿರುವ ಸಂಸ್ಕಾರವೇ ಹಾಗಿದೆ; ಚೇಳು ಹರಿದಾಡ್ತಾನೆ

ಕುಟುಕುತ್ತಲ್ಲ ಹಾಗೆ. ಅದನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು. ಅವರು ಎಲ್ಲಿಯೂ ಏಕವಚನ, ಅಗೌರವ ಸೂಚಕ ಪದ ಬಳಸಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿರುವವರು ಹೊಗಳಿಕೆಯಂತೆಯೇ ವಿಡಂಬನೆಯನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಜನರಲ್ಲಿ ಏಳುವ ಅನೇಕ ಸಂದೇಹಗಳಿಗೆ ನಾನು ಉತ್ತರಿಸಲು ಅವರು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ಧನ್ಯವಾದ ಹೇಳಿರಿ.

ವಿನೋದಾ ಕೃಷ್ಣಮೂರ್ತಿ, ಬೆಂಗಳೂರು

? ಸ್ವಯಂ ಘೋಷಿತ ಜಗದ್ಗುರು ಎಂದು ಕೆಲವರು ವ್ಯಂಗ್ಯವಾಗಿ ಬರೆಯುತ್ತಾರಲ್ಲ. ಅರ್ಹತೆಯಿಂದ ಗುರುವಾದವರು ನೀವು. ಹಾಗನ್ನುವುದು ಸರಿಯೆ?

★ ಕೆಲವರಿಗೆ ಅವರ ಅಂತರಂಗದಲ್ಲಿ ನಮ್ಮ ಬಗ್ಗೆ ಮೆಚ್ಚುಗೆ ಇರುತ್ತದೆ. ಆದರೆ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸುವ ಪ್ರಾಮಾಣಿಕತೆ ಇರುವುದಿಲ್ಲ. ಆಗ ಅವರು ವ್ಯಂಗ್ಯವಾಗಿ ಸತ್ಯವನ್ನು ಹೇಳುತ್ತಾರೆ. "ಸ್ವಯಂ ಘೋಷಿತ" ಇರುವವರು ವಿಶೇಷ ಪ್ರತಿಭೆಯುಳ್ಳವರು, ಉದಾ: ಒಂದು ರಾಜಕೀಯ ಪಾರ್ಟಿ ಹುಟ್ಟು ಹಾಕುವವರು - ಎನ್.ಟಿ.ರಾಮರಾವ್, ಚಿರಂಜೀವಿ, ಮಾಯಾವತಿ ಮುಂತಾದವರು. ಆದಿ ಶಂಕರಾಚಾರ್ಯರು, ಧರ್ಮಗುರು ಬಸವಣ್ಣನವರು ಇವರೆಲ್ಲ ಮಾಡಲ್ಪಟ್ಟ ಜಗದ್ಗುರುಗಳಲ್ಲ ಸಾಧನೆಯಿಂದ "ಆದವರು". ಇತಿಹಾಸದಲ್ಲಿ ಅವರಿಗೇ ಬೆಲೆ ಜಾಸ್ತಿ.

ಚಂದ್ರಿಕಾ ರಾಜಶೇಖರ್, ಬೆಂಗಳೂರು

? ಭಕ್ತಿಗೂ ತತ್ವ ನಿಷ್ಠಗೂ ವ್ಯತ್ಯಾಸವಿದೆಯೆ?

★ ಖಂಡಿತಾ ವ್ಯತ್ಯಾಸವಿದೆ. ಭಕ್ತಿವಂತರೆಲ್ಲ ತತ್ವನಿಷ್ಠರಲ್ಲ. ನಮ್ಮ ದೇಶದಲ್ಲಿ ಭಕ್ತಿವಂತರು ಕೋಟ್ಯಾನುಕೋಟಿ. ತತ್ವನಿಷ್ಠರು ಲಕ್ಷಕ್ಕೊಬ್ಬರು ಸಿಗುವುದೂ ದುರ್ಲಭ. ಉದಾಹರಣೆಗೆ ಬಾಲ್ಯದಿಂದಲೂ ನಮ್ಮ ಶಿಷ್ಯೆಯಾದ ಒಬ್ಬ ಮಹಿಳೆ ಇದ್ದಾಳೆ. ಇಂದಿಗೂ ಅವರ ತಾಯಿ - ತಂದೆ, ಅಕ್ಕ - ತಂಗಿ ಎಲ್ಲರೂ ನಮ್ಮ ಶಿಷ್ಯರು. ಆಕೆ ಪ್ರತಿಭಟನಾಕಾರರಲ್ಲಿ ಇದ್ದಳು. ನೋಡಿ ಬಂದ ನಮ್ಮ ಶರಣರಿಗೆ ಆಘಾತ. ಅವರೆಲ್ಲ ನೊಂದುಕೊಂಡು ಪ್ರಶ್ನೆ ಕೇಳಿದರು. ಆಕೆ ಫೋನ್ ಮಾಡಿ, ದಯವಿಟ್ಟು ಕ್ಷಮಿಸಿ. ನಾನು ಕಾರಣಾಂತರದಿಂದ ಕೆಲವರ ಹಂಗಿನಲ್ಲಿ ಸಿಕ್ಕಿದ್ದೇನೆ. ಇಷ್ಟವಿಲ್ಲದಿದ್ದರೂ ಬಂದು ಕುಳಿತುಕೊಳ್ಳ ಬೇಕಾಯಿತು. ಈಕೆಯಲ್ಲಿ ಭಕ್ತಿ ಇದೆ ತತ್ವ ನಿಷ್ಠೆಲ್ಲ. ಅದೇ ನಿಜ ಶರಣರು ತತ್ವಕ್ಕೆ ಕಟ್ಟುಬೀಳುವರೇ ವಿನಾ ಮಾನವರ ಹಂಗಿಗೆ ಸಿಕ್ಕಿಬೀಳುವುದಿಲ್ಲ.

ಲಕ್ಷ್ಮಿದೇವಿ ಮಲ್ಲನಗೌಡರು, ಬೆಂಗಳೂರು

? ದಿ. 6-8-08ರಂದು ಒಳಗೆ ಬಸವ ಪಂಚಮಿ ಕಾರ್ಯಕ್ರಮ ನಡೆಯುತ್ತಿತ್ತು. ಹೊರಗೆ ಬೆರಳ ಮೇಲೆ ಎಣಿಸುವಷ್ಟು ಜನ ಹೊರಗೆ ಧರಣಿ ಮಾಡಿದ್ದರು. ಕೆಲವು ದಿನ ಪತ್ರಿಕೆಯಲ್ಲಿ ಫೋಟೋ ಮುದ್ರಿತವಾಗಿತ್ತು. ಅದರಲ್ಲಿ ಒಬ್ಬರು ಸ್ಕಾರ್ಫ್ ಹಾಕಿದವರಿದ್ದರು. ನೋಡಿ ಗಾಬರಿಯಾಯಿತು.

★ ಗಾಬರಿಯಾಗುವ ಕಾರಣವಿಲ್ಲ. ಒಂದು ಅಜ್ಜಿ ಇದೆ. ಅದಕ್ಕೆ ಏನೂ ತಿಳಿಯುವುದಿಲ್ಲ. ಮುಗ್ಧ ಭಾವದಿಂದ ಎಲ್ಲ ಕಡೆಗೂ ಬರುತ್ತದೆ. ಶರಣ ಮೇಳ, ಕಲ್ಯಾಣ ಪರ್ವ, ದೆಹಲಿ ಸಮ್ಮೇಳನ ಹೀಗೆ ಯಾವುದೊಂದನ್ನು ತಪ್ಪಿಸುವುದಿಲ್ಲ. ಆದರೆ ಯಾವ ತತ್ವವೂ ಅರ್ಥವಾಗುವುದಿಲ್ಲ. ಈ ಹಿಂದೆ ರಾ.ಬ.ದಳದಿಂದ ಧರಣಿ, ಪ್ರತಿಭಟನೆ ಮಾಡಿದ್ದಾಗ ಬಂದಿದ್ದಳು. ಈಗ ಅವರು ಕೆಲವರು ಕೂತಿದ್ದು ನೋಡಿ ತಾನೂ ಹೋಗಿ ಜೊತೆಗೆ ಕೂತಿದ್ದಳು ಅಷ್ಟೆ! ಇಂಥವರೆಲ್ಲ ಸೇರಿಯೂ 20 ಜನರು ಇರಲಿಲ್ಲ. ಅಂದರೆ ಒರಿಜನಲ್ ಪ್ರತಿಭಟನಾಕಾರರು ಎಂದರೆ ಲೀಡರ್ ಲೀಲಾವತಿ ಪ್ರಸಾದ್, ಡಾ।। ಚಿ.ಮೂ, ಪ್ರೊ.ಮರುಳುಸಿದ್ಧಯ್ಯ, ಗೊ.ರು.ಚ, ಪ್ರಮೀಳಾ ನೇಸರ್ಗಿ ಎಂಬ ಪಂಚ ಪ್ರಮುಖರು ಮಾತ್ರ ಇದ್ದಂತೆ ತೋರುತ್ತದೆ.

ಚಂದ್ರಶೇಖರ್ ನಾವಿ, ಧಾರವಾಡ

? ಒಬ್ಬರು ಸುಮಾರು 25 -30 ವರ್ಷಗಳಿಂದ ನಿಮ್ಮ ಅಭಿಮಾನಿಗಳಾಗಿದ್ದವರು ಈಗ ದೂರ ಸರಿದು, ವಿರುದ್ಧ ಪ್ರಚಾರದಲ್ಲಿ ತೊಡಗಿದ್ದಾರೆ. ಇದಕ್ಕೆ ತಮ್ಮ ಅಭಿಪ್ರಾಯವೇನು?

★ ಈ ಜೀವನ ಒಂದು ಓಟದ ಪಥ (Track). ಹಲವಾರು ಓಟಗಾರರು ಒಟ್ಟಿಗೆ ಓಡತೊಡಗುತ್ತಾರೆ. ಕೆಲವರು ಬೇಗನೆ ದಣಿದು ಪಥದಿಂದ ದೂರ ಸರಿಯುತ್ತಾರೆ. ನಿಮ್ಮ ಮಿತ್ರರು ಗುರಿ ಮುಟ್ಟಲು ಸ್ವಲ್ಪವೇ ಇದ್ದಾಗ ಪಥದಿಂದ ನಿರ್ಗಮಿಸಿದ್ದಾರೆ. ಯಾರ್‍ಯಾರ ಋಣ ಎಷ್ಟು ದಿನ ಇರುತ್ತೋ ಅಷ್ಟು ದಿವಸ ಸಾಂಗತ್ಯ; ಮನುಷ್ಯ ಸ್ವಭಾವವೇ ಹಾಗೆ! ತನಗೆ ಗೊತ್ತಿಲ್ಲದಂತೇ ಭ್ರಾಂತಿಗೆ ಬಲಿಯಾಗುತ್ತಾನೆ. ಕೋಪ ಮಾಡಿಕೊಳ್ಳಬೇಡಿ ಅವರ ಬಗ್ಗೆ ಅನುಕಂಪವಿರಲಿ.

ಮಧುಕರ ಶೆಟಕಾರ, ಬಿಜಾಪುರ

? ಒಬ್ಬರು ಹೇಳುತ್ತಿದ್ದರು, ವಚನಾಂಕಿತ ಪ್ರಸಂಗದಲ್ಲಿ ಏಕಿಷ್ಟು ತೊಂದರೆಗೆ ಒಳಗಾಗಬೇಕು? ಪ್ರವಾಹದ ವಿರುದ್ಧ ಈಜುವುದರಿಂದ ಶಕ್ತಿ ವ್ಯರ್ಥವಾಗುತ್ತದೆ. ಲಿಂಗದೇವ ವಚನಾಂಕಿತ ವಾಪಸ್ಸು ಪಡೆದರೆ ಆದೀತು ಎನ್ನುತ್ತಾರೆ.

★ ಒಂದು ಭೌತಿಕ ಶಿಶುವನ್ನು ಹೆರಲು ತಾಯಿ ಎಷ್ಟು ಹೆರಿಗೆ ನೋವು ಅನುಭವಿಸುತ್ತಾಳೆ. ಸತ್ಯವನ್ನು ಹೊರತರಲು ದಾರ್ಶನಿಕರು ಸದಾ ಕಷ್ಟಪಡುತ್ತಲೇ ಬಂದಿದ್ದಾರೆ. ಮಗು ಮುದ್ದಾಗಿ ಆಟವಾಡುವಾಗ ತಾಯಿಗೆ ಎಷ್ಟು ಸಂತೋಷವಾಗುತ್ತದೆಯಲ್ಲವೆ? ಹಾಗೆ ಲಿಂಗದೇವನ ಮಹತ್ವ ಎಲ್ಲರಿಗೂ ತಿಳಿದಾಗ ನಮಗೆ ನೋವು ಮರೆತು ಅತೀವ ಹರ್ಷವಾಗುತ್ತದೆ. ಅಂತಲೇ ಸತ್ಯ ಹರಿಶ್ಚಂದ್ರನಂತಹವನು ಸತ್ಯಕ್ಕಾಗಿ ಎಷ್ಟು ಕಷ್ಟಪಟ್ಟನಲ್ಲವೆ?

ಶರಣರ ಕ್ಷೇತ್ರ ಪರಿಚಯ

ದೂರ ದೂರವೇ ಸಾಗಿ ಸೇರಿದರು ಹಳ್ಳಿಗಳ
ಯಾರು ಯಾರೆಂಬ ಗುರು ತಳಿದು । ಮರೆಯಾಗಿ
ಅರಿ ಕೆಂಡದಗಿ ಬೂದಿಯೊಳು ।।

ಕಲ್ಯಾಣ ಕ್ರಾಂತಿಯ ನಂತರ ಶರಣರು ಕಲ್ಯಾಣದಿಂದ ಚದುರಿ ಹಳ್ಳಿಗಳನ್ನು ಸೇರಿದರು. ಕೆಲವರು ತಮ್ಮ ಹಳ್ಳಿಗಳಿಗೇ ವಾಪಾಸ್ಸಾದರು. ಕೆಲವರು ಬೇರೆ ರಾಜ್ಯಗಳಿಗೇ ಹೋಗಿ ನೆಲೆಸಿದರು. ಬಸವ ಕಲ್ಯಾಣದ ಸುತ್ತ, ಬೀದರ, ಗುಲಬರ್ಗಾ ಜಿಲ್ಲೆಗಳಲ್ಲಿ ಹಳ್ಳಿಗಳಲ್ಲಿ ಆ ಶರಣರ ಹೆಸರಿನ ಗುಡಿಗಳಿವೆ. ಈಗ ಅವುಗಳನ್ನು ಪತ್ತೆ ಹಚ್ಚಿ ಒಂದು ಪುಸ್ತಕ ಸಿದ್ಧಪಡಿಸುವುದು ಅಗತ್ಯವಿದೆ. ಆದ್ದರಿಂದ ಗ್ರಾಮಸ್ಥರು ತಮ್ಮೂರಲ್ಲಿ ಶರಣರ ಗದ್ದುಗೆ ಇದ್ದರೆ ಅದರ ವಿವರವನ್ನು ಫೋಟೋ ಸಹಿತ ಕಳಿಸಿಕೊಟ್ಟರೆ ಒಳ್ಳೆಯದು.

ಕಲ್ಯಾಣ ಪರ್ವಕ್ಕೆ ಆಯಾ ಶರಣರ ಹೆಸರಲ್ಲಿ ಜ್ಯೋತಿಯನ್ನು ತಂದರೆ ಇನ್ನೂ ಸಂತೋಷವಾಗುವುದು.

- ಕಲ್ಯಾಣ ಪರ್ವ ಉತ್ಸವ ಸಮಿತಿ

ಸರ್ವ ಧರ್ಮ ಸಂಸತ್ ಉದ್ಘಾಟನೆ

ದಿ. 24-9-2008ರಂದು ಬೆಂಗಳೂರು ನಗರದ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಕರ್ನಾಟಕ ಜೀವನ ವಿಜ್ಞಾನ ಅಕ್ಯಾಡಮಿ ಎಂಬ ಜೈನ ತೇರಾಪಂಥ ಸಂಸ್ಥೆಯು ಸರ್ವಧರ್ಮ ಸಮ್ಮೇಳನವನ್ನು ಆಯೋಜಿಸಿತ್ತು. ಸರ್ವ ಧರ್ಮ ಸಂಸತ್ತನ್ನು ಉದ್ಘಾಟಿಸಲಾಯಿತು. ಆಚಾರ್ಯ ತುಳಸೀಜಿ ಅವರು ಆರಂಭಿಸಿದ ಅಹಿಂಸಾ ಚಳುವಳಿ, ಅಣುವ್ರತ ಆಂದೋಲನವನ್ನು ಮುಂದುವರಿಸಿರುವ ಆಚಾರ್ಯ ಮಹಾಪ್ರಜ್ಞಾರವರ ವರ್ಧಂತಿ ಉತ್ಸವದ ನಿಮಿತ್ತ ಬಡವರಿಗೆ ಉಚಿತವಾಗಿ ಮೆಡಿಕಲ್ ತಪಾಸಣಾ ಶಿಬಿರವನ್ನು ದಿ. 23ಮತ್ತು ದಿ.24 ಎರಡೂ ದಿನಗಳಂದು ಏರ್ಪಡಿಸಲಾಗಿತ್ತು. ಪೂಜ್ಯ ಪೇಜಾವರ ಮಠಾಧೀಶರು, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಕೊಳದ ಮಠದ ಪೂಜ್ಯ ಶ್ರೀ ಶಾಂತವೀರ ಸ್ವಾಮೀಜಿ, ಬೇಲಿ ಮಠದ ಪೂಜ್ಯ ಶ್ರೀ ಶಿವರುದ್ರ ಸ್ವಾಮೀಜಿ, ಮೂಡಬಿದರೆಯ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ತುಮಕೂರಿನ ಶ್ರೀ ರಾಮಕೃಷ್ಣಾಶ್ರಮದ ಪೂಜ್ಯ ಶ್ರೀ ವೀರೇಶಾನಂದ ಸ್ವಾಮೀಜಿ - ಇನ್ನೂ ಅನೇಕ ಶ್ರೀಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪೂಜ್ಯ ಶ್ರೀ ದಯಾನಂದ ಸ್ವಾಮೀಜಿಯವರು ಕಾರ್ಯಕ್ರಮ ರೂಪುರೇಷೆ ನಿರ್ವಹಿಸಿದರು.

ಕಲ್ಯಾಣ ಪರ್ವಕ್ಕೆ ಜಯವಾಗಲಿ

ಕನ್ನಡ ನಾಡಿನ ಕಲ್ಯಾಣದಲ್ಲಿ ಮನುಕುಲದ ಕ.
ಲ್ಯಾಣಕ್ಕಾಗಿ ಅಂದು ಚದುರಿಹೋದ ಶರ
ಣ ಬಳಗವ ಮತ್ತೆ ಒಂದುಗೂಡಿಸಲು
ಪಣತೊಟ್ಟು, ಅದೇ ಶರಣಭೂಮಿಯಲಿ ನಡೆಯುವ ಶರಣರ ಪ
ರ್ವಕ್ಕೆ ಲಿಂಗದೇವನ ಕೃಪೆಯಿಂದ ಜಯವಾಗಲಿ

- ಸವಿತಾ ಶಾಂತು, ಬೆಂಗಳೂರು

ಮಹಿಳೆ ಮತ್ತು ಸರ್ವತೋಮುಖ ಅಭಿವೃದ್ಧಿ

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು;
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು;
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು;
ಅದು ಕಾರಣ, ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ!

ಶಿವಯೋಗಿ ಸಿದ್ಧರಾಮೇಶ್ವರರ ಒಂದು ವಚನವಿದು. ಸೂಕ್ಷ್ಮವಾಗಿ ಅವಲೋಕಿಸಿದರೆ ಈ ವಚನವು ಪೌರಾಣಿಕ ಉಪಮೆಗಳ ಮೂಲಕ ಸ್ತ್ರೀಯ ಸಾಧನೆಯ ಪ್ರಶಂಸೆಯನ್ನು ಮಾಡುವಂತೆ ತೋರುತ್ತದೆ.

"ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿ" ಎಂದು ನಿಲ್ಲಿಸಿದ್ದರೆ ಆಗ ಸ್ತ್ರೀಯ ಬಗೆಗೆ ಸಿದ್ಧರಾಮೇಶ್ವರರು ಹೊಂದಿದ್ದ ತಿರಸ್ಕಾರ ಅಭಿವ್ಯಕ್ತವಾಗುತ್ತಿತ್ತು. ಇಲ್ಲಿ ವಿವರಣೆ ಅಭಿನಂದನಾತ್ಮಕವಾಗಿದೆ. ಪುರುಷನು ಅವಕಾಶವನ್ನು ನೀಡಿದ್ದೇ ಆದರೆ ಸ್ತ್ರೀಯು ಜ್ಞಾನಶಕ್ತಿಯಾಗಿ, ಕ್ರಿಯಾ ಶಕ್ತಿಯಾಗಿ, ವಾಗ್ಮಿಯಾಗಿ, ಭಾವ ಶ್ರೀಮಂತೆಯಾಗಿ ಬೆಳಗಲಿಕ್ಕೆ ಸಾಧ್ಯ ಎಂಬ ಧ್ವನಿ ಇಲ್ಲಿದೆ. ಶಿವ ಪುರಾಣಗಳಲ್ಲಿ ಬರುವ ಅರ್ಧ ನಾರೀಶ್ವರನ ಕಲ್ಪನೆಯಲ್ಲಿ ಶಿವ - ಶಕ್ತಿ ಪುರುಷ -ಪ್ರಕೃತಿ ಸೃಷ್ಟಿಯ ಅವಿಭಾಜ್ಯ ಅಂಗವಾದಂತೆ ಪುರುಷ -ಸ್ತ್ರೀ ಸಮಾಜದ ಎರಡು ಕಣ್ಣುಗಳು ಎಂಬ ಪರಿಕಲ್ಪನೆ (Concept) ಇದೆ.

ಹೆಣ್ಣಿನಿಂದಲೇ ಇಹವು ಹೆಣ್ಣಿನಿಂದಲೇ ಪರವು
ಹೆಣ್ಣಿನಿಂದಲೇ ಸಕಲ ಸಂಪದವು । ಜಗದಲ್ಲಿ
ಹೆಣ್ಣೊಲ್ಲದಣ್ಣಗಳು ಯಾರು ಸರ್ವಜ್ಞ?

ಎಂಬ ಸರ್ವಜ್ಞನ ವಚನದಲ್ಲಿ ಸ್ತ್ರೀಯು ಪತ್ನಿಯಾಗಿ ಅಲ್ಲದಿದ್ದರೂ ತಾಯಿಯಾಗಿ, ಸಹೋದರಿಯಾಗಿ ಬೇಕೇಬೇಕು ಎಂಬ ಭಾವವಿದೆ. ಹೀಗೆ ಸ್ತ್ರೀಯ ಸ್ಥಾನವನ್ನು ಪ್ರಾಜ್ಞರು ಗುರುತಿಸಿದ್ದಾರೆ. ಅಂಥ ಸ್ತ್ರೀಯನ್ನು ಮಾಯೆ ಎಂದು ಕೀಳಾಗಿ ಕಂಡಾಗ ವಿಚಾರ ಶೀಲರಾದ ಶರಣರು "ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ" ಎಂದು ಅಂಥ ದೃಷ್ಟಿದೋಷವಿದ್ದವರನ್ನು ಟೀಕಿಸಿದ್ದಾರೆ.

ಹೀಗೆ ಮಹಿಳೆಯು ಸಮಾಜದ ಅತ್ಯಂತ ಅವಶ್ಯಕವಾದ ಅಂಗ. ಆದ್ದರಿಂದ ಸಮಾಜವು ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಬೇಕಾದರೆ ಆ ಪ್ರಗತಿಯಲ್ಲಿ ಮಹಿಳೆಗೆ ಸಮಪಾಲು ಸಿಗುವುದು ಅತ್ಯಂತ ಅವಶ್ಯವಿದೆ. ಮಹಿಳೆಯನ್ನು ಅಬಲೆ, ದುರ್ಬಲಳು ಎಂದು ಕರೆಯಲಾಗುವುದು. ಆದರೂ ಅದು ಶಾರೀರಿಕ ದೃಷ್ಟಿಯಿಂದ ಸರಿ ಎನ್ನಿಸಬಹುದೇ ವಿನಾ ಮಾನಸಿಕ, ಬೌದ್ಧಿಕ ನೆಲೆಗಟ್ಟಿನಿಂದಲ್ಲ. ಶಾರೀರಿಕವಾಗಿಯಾದರೂ, ಕೆಲವು ವೀರ ಮಹಿಳೆಯರನ್ನು ಉದಾಹರಣೆಗೆ ಕೆಳದಿ ಚನ್ನಮ್ಮ, ಕಿತ್ತೂರು ಚನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ಈಗಿನ ಕಿರಣ್ ಬೇಡಿ ಅಂಥವರನ್ನು ನೋಡಿದಾಗ ಮಹಿಳೆ ದುರ್ಬಲಳಲ್ಲ ಎಂಬುದು ಮನದಟ್ಟಾಗುತ್ತದೆ. ಹೀಗೆ ಆಂತರಿಕವಾಗಿ ಶಕ್ತಿಯು ಸುಪ್ತವಾಗಿದ್ದರೂ ಅದು ವಿಕಸನಗೊಳ್ಳಲು ಬೇಕಾದ ಪರಿಸರ, ಪ್ರೋತ್ಸಾಹ ಇಲ್ಲದಿದ್ದರೆ ಸ್ತ್ರೀಯು ಮುಂದೆ ಬರಲು ಸಾಧ್ಯವಿಲ್ಲ.

ಭಾರತೀಯ ದೃಷ್ಟಿಕೋನ

ಆಧುನಿಕ ಜಗತ್ತಿನಲ್ಲಿ ಸಹ ವಿಜ್ಞಾನವು ಪ್ರಗತಿ ಸಾಧಿಸಿರುವ ಸನ್ನಿವೇಶದ ಹಿನ್ನೆಲೆಯಲ್ಲಿ ಗರ್ಭಿಣಿ ತಾಯಿಯ ಅಂತರ್ಗತ ಶಿಶುವು ಹೆಣ್ಣು ಆಗಿದ್ದರೆ ಅದನ್ನು ಭೂಮಿಗೆ ಬೀಳುವ ಮುನ್ನವೇ ಅಂತ್ಯಗೊಳಿಸುವ ಕ್ರೌರ್ಯವನ್ನು, ಹೆಣ್ಣು ಹುಟ್ಟಿದರೆ ಮುಖವನ್ನು ಬಾಡಿಸಿಕೊಂಡು, ನಂತರ ಎಳೆಯ ಶಿಶುವನ್ನು ಹತ್ಯೆಮಾಡುವ ಅಮಾನುಷತೆಯನ್ನು ಕಾಣುತ್ತೇವೆ. ಇದಕ್ಕೆ ಕಾರಣವೇನೆಂದರೆ ಹೆಣ್ಣು ದೊಡ್ಡವಳಾದ ಮೇಲೆ ಮದುವೆ ಮಾಡುವುದು ಹೆಣ್ಣು ಹೆತ್ತವರಿಗೆ ಒಂದು ದೊಡ್ಡ ಸಮಸ್ಯೆ. ಮದುವೆ ಒಂದು ವ್ಯಾಪಾರವಾಗಿ ವರದಕ್ಷಿಣೆಯ ಪಿಡುಗು ಮಿತಿ ಮೀರಿರುವುದರಿಂದ ತಾಯಿ ತಂದೆಯರಿಗೆ ಅದೂ ಮಧ್ಯಮ ವರ್ಗದವರಿಗೆ ತಮ್ಮ ಮಗಳೇ ತಮಗೆ ಶಾಪವೆಂಬಂತಾಗುತ್ತದೆ. ಹೀಗೆ ತಾವೇ ಹೆಣೆದುಕೊಂಡ ಸಮಸ್ಯೆಗಳ ಬಲೆಯಲ್ಲಿ ಸಿಕ್ಕಿ ಭಾರತೀಯರು ಒದ್ದಾಡುತ್ತಿದ್ದಾರೆ. ಪರಿಹಾರ?

1. ಮೊಟ್ಟ ಮೊದಲನೆಯದಾಗಿ ಸ್ತ್ರೀಗೆ ಶಿಕ್ಷಣ ಕೊಟ್ಟು ಸ್ವಾವಲಂಬಿಯನ್ನಾಗಿ ಮಾಡುವುದು, ತನ್ನ ಅನ್ನವನ್ನು ತಾನು ಸಂಪಾದಿಸಿಕೊಳ್ಳುವಂತೆ ವ್ಯಕ್ತಿತ್ವ ರೂಪಿಸುವುದು ಅಗತ್ಯವಾಗಿ ಆಗಬೇಕಾದ

ಕಾರ್ಯ. ವಿದ್ಯೆ ಮತ್ತು ವಿವಾಹ, ಉದ್ಯೋಗ ಮತ್ತು ವಿವಾಹ ಎರಡರ ಮಧ್ಯೆ ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದರೆ ಮಹಿಳೆಯು ವಿದ್ಯೆ ಮತ್ತು ಉದ್ಯೋಗಕ್ಕೆ ಆದ್ಯತೆ ನೀಡಬೇಕು. ಏಕೆಂದರೆ ವಿವಾಹವಾಗಿ, ದಾಂಪತ್ಯವೂ ಸುಖಮಯವಾಗಿದ್ದರೂ ಜೀವನದಲ್ಲಿ ಏನಾದರೂ ಅವಗಢ ಸಂಭವಿಸಿದರೆ ಅದನ್ನು ಎದುರಿಸಲು ಸ್ತ್ರೀಗೆ ವಿದ್ಯೆ ಮತ್ತು ಉದ್ಯೋಗ ನೆರವಾಗುತ್ತವೆ. ಬೆಲೆ ಏರಿಕೆಯ ದಿನ ಮಾನದಲ್ಲಿ ಪತಿ -ಪತ್ನಿ ಇಬ್ಬರೂ ದುಡಿಯಲು ಶಿಕ್ಷಣವು ನೆರವಾಗುತ್ತದೆ. ಪತಿಯು ವಿಶೇಷವಾದ ವ್ಯಾಪಾರ - ವಾಣಿಜ್ಯ ಹೊಂದಿದ್ದರೆ ಸಲಹೆ - ಸಹಕಾರ ನೀಡಿ ನೆರವಾಗಲೂ ಶಿಕ್ಷಣವು ನೆರವಾಗುತ್ತದೆ. ದುಡಿಯುವ, ಆದಾಯ ತರುವ ಸ್ತ್ರೀ ಇದ್ದಾಗ ವರದಕ್ಷಿಣೆಯ ಬೇಡಿಕೆಯೂ ಕಮ್ಮಿ ಇದ್ದು ವಿವಾಹವು ಸುಲಭವಾಗಿ ಆಗಲು ಹೆಚ್ಚಿನ ಅವಕಾಶಗಳಿರುತ್ತವೆ.

2. ಮಹಿಳೆಯಲ್ಲಿ ಆತ್ಮಬಲ ಬೆಳೆಸುವ ಮಾನಸಿಕ, ಬೌದ್ಧಿಕ ತರಬೇತಿ ಇನ್ನೂ ಮುಖ್ಯವಾದ ಅಂಶ. ಮದುವೆ, ಪತಿ, ಮಕ್ಕಳು, ಸಂಸಾರದಷ್ಟೇ ಜೀವನ ಎಂಬ ಭಾವವನ್ನು ನಿರಂತರವಾಗಿ ಸ್ತ್ರೀಯ ಮನಸ್ಸಿನಲ್ಲಿ ತುಂಬಲಾಗುವುದು. ಈ ಬಗೆಯ ಏಕತಾನತೆಯ ಜೀವನಕ್ಕೆ ಹೊರತಾದ ಆದರ್ಶ ಜೀವನ ವಿಧಾನವು ಇರಬಲ್ಲುದು ಎಂಬುದನ್ನು ಪರಿಚಯಿಸುವ ಗೋಜಿಗೆ ಭಾರತೀಯರು ಹೋಗುವುದೇ ಇಲ್ಲ.

ಪಾಶ್ಚಿಮಾತ್ಯ ಜೀವನ ಶೈಲಿಯಲ್ಲಿ ಸ್ವೇಚ್ಛಾಚಾರ, ಶಾರೀರಿಕ ಸೌಂದರ್ಯ ಪ್ರದರ್ಶನ ಕಾಣಬರುತ್ತಿದ್ದರೂ ಬಹುಪಾಲು ಮಹಿಳೆಯರು ಶೃಂಗಾರಕ್ಕಿಂತಲೂ ಮಿಗಿಲಾಗಿ ಅಧ್ಯಯನ, ಬರವಣಿಗೆ, ಕಾಯಕ ನಿಷ್ಠೆ, ಸಂಶೋಧನೆ, ಕ್ರೀಡೆ, ಸಾಹಸಗಳಲ್ಲಿ ಆಸಕ್ತರಾಗಿರುವುದನ್ನು ಗಮನಿಸಬಹುದು. ಭಾರತೀಯ ಮಹಿಳೆಯರು ಬಹುಪಾಲು ಸಮಯವನ್ನು ಶೃಂಗರಿಸಿಕೊಳ್ಳುವುದರಲ್ಲಿ ವಸ್ತ್ರ - ಆಭರಣಗಳನ್ನು ಸಂಗ್ರಹಿಸಿ ಉಡು -ತೊಡುವುದರಲ್ಲಿ ವ್ಯರ್ಥ ಮಾಡುತ್ತಲಿದ್ದಾರೆ. ಅಧ್ಯಾತ್ಮಿಕ ಚಿಂತನೆಗೆ ಖ್ಯಾತಿವೆತ್ತಿದ್ದ ಈ ದೇಶದ ಜನ ಅದೆಷ್ಟು ಬಹಿರ್ಮುಖರೂ, ಲೌಕಿಕಾಸಕ್ತರೂ ಆಗುತ್ತಿದ್ದಾರೆಂದು ಆಶ್ಚರ್ಯವೆನಿಸುತ್ತಿದೆ.

3. ಉದಾತ್ತೀಕರಣ: ಧ್ಯೇಯವಾದ ಮತ್ತು ಉದಾತ್ತೀಕರಣಗಳ ಕಡೆಗೆ ಚಿತ್ತ, ಮನ, ಬುದ್ಧಿಗಳು ಹರಿಯುವ ದಿಶೆಯಲ್ಲಿ ಭಾರತೀಯ ಪುರುಷ ಹಾಗೂ ಮಹಿಳೆಯರ ಚಿಂತನೆಯನ್ನು ರೂಪಿಸುವುದು ಇಂದು ಅತ್ಯಗತ್ಯವಾಗುತ್ತಿದೆ. ಬದುಕು ಒಂದು ಶ್ರೇಷ್ಠ ವರ. ಲಭ್ಯವಾಗಿರುವ ಶರೀರ, ಮನ, ಬುದ್ಧಿ ಮತ್ತು ಗಳಿಸಿದ ಹಣವನ್ನು ಸಾರ್ಥಕವಾಗಿ ಬಳಸುವುದರಲ್ಲೇ ಮನುಷ್ಯನ ಹಿರಿಮೆ ಇದೆ. ಒಮ್ಮೆ ಒಬ್ಬ ಸಿರಿವಂತ ಭವ್ಯವಾದ ಮನೆಯೊಂದನ್ನು ಕಟ್ಟಿಸಿದ. ಅದರ ಪ್ರಾರಂಭೋತ್ಸವಕ್ಕೆ ಅರ್ಥಾತ್ ಗೃಹ ಪ್ರವೇಶಕ್ಕೆ ದೊಡ್ಡ ಗುರುಗಳನ್ನು ಆಹ್ವಾನಿಸಿದ್ದ. ಅವರು ಕೀರ್ತಿಶಾಲಿ ಉಪನ್ಯಾಸಕರು. ಈ ಮನೆಯ ಪರಿಚಯ ಮಾಡಿಕೊಟ್ಟರೆ ತಮ್ಮ ಉಪನ್ಯಾಸಗಳಲ್ಲಿ ಹೋದ ಕಡೆಯಲ್ಲೆಲ್ಲ ಈ ಮನೆಯ ಭವ್ಯತೆಯ ಬಗ್ಗೆ ಕೊಂಡಾಡುವರು ಎಂದು ಆತನ ಲೆಕ್ಕಾಚಾರ. ಬೆಳ್ಳಿಯ ನಲ್ಲಿಯ ಕೊಳವೆ, ಅದಕ್ಕೆ ಬಂಗಾರದ ನಲ್ಲಿ, ಮುತ್ತು ರತ್ನಗಳ ಅಲಂಕಾರ ಆ ನಲ್ಲಿಯ ಹಿಡಿಕೆಗೆ. ನಿಜಕ್ಕೂ ಸೋಜಿಗವೇ! ಕುತೂಹಲದಿಂದ ಗುರುಗಳು ನಲ್ಲಿ ತಿರುವಿದರು. ನೀರೇ ಬರಲಿಲ್ಲ. ಮೇಲಿದ್ದ ನೀರಿನ ಸಂಗ್ರಹಣಾ ತೊಟ್ಟಿಗೆ ಸಂಪರ್ಕ ಕೊಡಲು ಮರೆಯಲಾಗಿದ್ದಿತ್ತು. "ಧನವಂತಾ, ಇಲ್ಲಿ ನೀರು ಮುಖ್ಯವೇ ವಿನಾ ನಲ್ಲಿಯ ಕೊಳವೆ, ಬಂಗಾರದ ನಲ್ಲಿ, ಮುತ್ತುರತ್ನಗಳ ಹಿಡಿಕೆಯಲ್ಲ." ಎಂದರು ಗುರುಗಳು. ಹಾಗೆಯೇ ದೈವಿಕ ಮೌಲ್ಯಗಳೆಂಬ ನೀರಿನ ವಾಹಿನಿ ಇಲ್ಲದ ಭೌತಿಕ ಶ್ರೀಮಂತಿಕೆಯ ನಲ್ಲಿ ಇದ್ದೇನು ಪ್ರಯೋಜನ?! ಇಲ್ಲಿ ಆ ಧನವಂತ ಮಾಡಿದುದೆಲ್ಲ ಅನವಶ್ಯಕ ಖರ್ಚು, ನಿಷ್ಪ್ರಯೋಜಕ ಪರಿಶ್ರಮ. ಹಿಂದು ಸಮಾಜ ವ್ಯವಸ್ಥೆಯಲ್ಲಿ ಒಂದು ಮದುವೆಯನ್ನೇ ಗಮನಿಸಿದರೆ ನನ್ನ ಮಾತು ಮನದಟ್ಟಾಗದಿರದು. ಅನವಶ್ಯಕ ವೈಭವ ಅಗತ್ಯವಿಲ್ಲದ ತಿಂದು ಜೀರ್ಣಿಸಿಕೊಳ್ಳಲಾರದ ಊಟ, ಉಂಡುದಕ್ಕಿಂತ ಬಿಸಾಡುವ ಪ್ರಮಾಣವೇ ಹೆಚ್ಚು. ಸಮಾವೇಶವಾದ ಮಹಿಳೆಯರಂತೂ ಬರೀ ಅಲಂಕಾರದ ಆಡಂಬರದಲ್ಲಿ ಸೀರೆ - ಒಡವೆಗಳ ಪ್ರದರ್ಶನದಲ್ಲೇ ತಲ್ಲೀನರು. ಶ್ರೀಮಂತರ ಮದುವೆಗಳು ಫ್ಯಾಷನ್ ಶೋಗಳಂತೆ. ಒಂದು ಮದುವೆಗಾಗಿ ಎಷ್ಟು ಜನರ ಸಮಯ, ಹಣ ವ್ಯರ್ಥ?! ಇನ್ನು ಏನಾದರೂ ಅಲ್ಲಿ ಚಿಂತನೆಯುಂಟೆ? ಧರ್ಮ, ಸಮಾಜ, ರಾಷ್ಟ್ರ ಮುಂತಾದವುಗಳ ಬಗ್ಗೆ ಗಂಭೀರ ಚಿಂತನೆ? ಕೆಲವರು ಬದುಕುವ ವೈಭವದ ಬದುಕಿಗೆ ಸಂಪನ್ಮೂಲ ಹರಿದು ಬರಲು ಅನ್ಯಾಯ, ಅಕ್ರಮ, ಮೋಸ, ಭ್ರಷ್ಟಾಚಾರಗಳ ಮಾರ್ಗವನ್ನು, ಗಳಿಕೆಯ ಸುಲಭವಾದ ವಿಧಾನವನ್ನು ಮನುಷ್ಯನು ಹುಡುಕಲು ಆರಂಭಿಸುತ್ತಾನೆ. ಹೀಗೆ ಭಾರತೀಯರು ವಿಚಿತ್ರವಾದ ಮೌಲ್ಯಗಳ ವಿಷ ವರ್ತುಲವನ್ನು ನಿರ್ಮಿಸಿಕೊಂಡುಬಿಟ್ಟಿದ್ದಾರೆ. ರೇಷ್ಮೆ ಹುಳುವಿನಂತೆ

ತಾವೇ ಹೆಣೆದುಕೊಂಡ ಜಾಲದಲ್ಲಿ ಸಿಕ್ಕಿ, ಹೊರಬರಲಾಗದಂತೆ ಒದ್ದಾಡುತ್ತಿದ್ದಾರೆ.

ಜೀವನವು ಸುಂದರವೂ, ಸರಳವೂ, ಅರ್ಥಗರ್ಭಿತವೂ, ಸಂತೃಪ್ತಿದಾಯಕವೂ ಆಗ ಬೇಕಾದರೆ ಇದರಲ್ಲಿ ಅಳವಡಬೇಕಾದ ಮೌಲ್ಯಗಳು ಭೌತಿಕ(material), ನೈತಿಕ(moral), ಬೌದ್ಧಿಕ(intellectual) ಮತ್ತು ಅಧ್ಯಾತ್ಮಿಕ (spiritual) ಎಲ್ಲ ಅಂಶಗಳನ್ನು ಒಳಗೊಂಡಿರಬೇಕು. ಜನರನ್ನು ಧ್ಯೇಯವಾದಿಗಳನ್ನಾಗಿ ಮಾಡಲು ಇದೀಗ ಎಲ್ಲ ವಿಧದ ಪ್ರಯತ್ನವನ್ನು ಮಾಡುವುದು ಅಗತ್ಯವಿದೆ. ಅದರಲ್ಲೂ ಮುಖ್ಯವಾಗಿ ಸ್ವಭಾವತಃ ದುರ್ಬಲರು, ಅಬಲೆಯರು, ನಿಸ್ಸಹಾಯಕರು ತಾವು ಎಂದು ಸ್ವತಃ ನಂಬಿರುವ ಸ್ತ್ರೀಯರಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸಬೇಕಾಗಿದೆ. ಇದಕ್ಕೆ ಸಹಾಯಕವಾಗುವವು ಶಿಕ್ಷಣ ಮತ್ತು ಉದ್ಯೋಗ. ಆರ್ಥಿಕ, ಔದ್ಯೋಗಿಕ ಸ್ವಾವಲಂಬನೆ ಸಾಧಿಸಿದ ಮಾತ್ರಕ್ಕೆ ಸಂತೃಪ್ತಿ - ಸಮಾಧಾನ ಲಭ್ಯವಾಗುವುದೆಂದು ಹೇಳಲು ಸಾಧ್ಯವಿಲ್ಲ, ಇದಕ್ಕೆ ಬೇಕಾದುದು ಜ್ಞಾನಾತ್ಮಕ ತರಬೇತಿ; ಬದುಕು ಸಾರ್ಥಕವಾಗುವುದು ಕೇವಲ ಅರ್ಥ (ಹಣ) ಸಂಪಾದನೆಯಿಂದಲ್ಲ ಉದಾತ್ತ ಮೌಲ್ಯಗಳ ಅಳವಡಿಕೆಯಿಂದ ಎಂಬುದನ್ನು ಎಲ್ಲರೂ ಅರಿಯಬೇಕು. "ಬೇಕು, ಇನ್ನೂ ಬೇಕು" ಎಂಬ ದಾಹದ, ಅತೃಪ್ತಿಯ ಭಾವವೇ ಬಡತನ. "ಸಾಕು, ಇರುವುದರಲ್ಲಿಯೇ ತೃಪ್ತಿ" ಎಂಬ ಸಮಾಧಾನವೇ ಶ್ರೀಮಂತಿಕೆ ಅದನ್ನೇ ಅನುಭವ ಮಂಟಪದ ಶರಣೆ ಆಯ್ದಕ್ಕಿ ಲಕ್ಕಮ್ಮ ಹೀಗೆ ಹೇಳುವುದು. "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೇನಯ್ಯಾ?" "ಭಾವನೆಯೆ ಎನಗಿದು ಜೀವನವು ಕೇಳಾ" ಎಂದು ವೀರವಿರಾಗಿಣಿ ಅಕ್ಕಮಹಾದೇವಿ ಹೇಳುವಂತೆ ವ್ಯಕ್ತಿಯು ಹೊಂದುವ ಭಾವನೆಗಳಲ್ಲೇ ಕೈಲಾಸ, ಸ್ವರ್ಗ, ನರಕ ಸುಖ-ದುಃಖ ಎಲ್ಲವೂ ಉಂಟು. ಈ ವರೆಗೆ ಹೇಳಿದ ಸ್ವಾವಲಂಬನೆ, ಸಂತೃಪ್ತಿಯನ್ನೂ ದಾಟಿ ನಿಲ್ಲುವ ಮತ್ತೊಂದು ಬಗೆಯ ಆದರ್ಶ ಜೀವನ ತ್ಯಾಗ -ಸೇವೆ-ವಿರತಿಗಳಿಂದ ಕೂಡಿದುದು. ಮೊದಲನೆಯ ಬಗೆಯ ಬದುಕಿನಲ್ಲಿ ತಾನು ಸುಖಿ, ಸ್ವಾವಲಂಬಿ, ಸಂತೃಪ್ತ. ಆದರೆ ಇದರಿಂದ ಇತರರ ನೋವಿಗೆ ಪರಿಹಾರ ನೀಡಿದಂತಾಗಲಿಲ್ಲ. ಆದ್ದರಿಂದ ಸಮಾಜಕ್ಕೆ ಸೇವೆ ಸಲ್ಲಿಸುವ ಮೂಲಕ ಸಂತೃಪ್ತಿ ಕಂಡುಕೊಳ್ಳುವುದೇ ಉದಾತ್ತ ಜೀವನದ ಧ್ಯೇಯ.

ಜೀವನದಲ್ಲಿ ಯಾವ ಸಂಕಷ್ಟವೂ ಎದುರಾಗದಿದ್ದರೂ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳ ಲೋಸುಗ ತ್ಯಾಗ - ಸೇವೆಗಳನ್ನು ಅಳವಡಿಸಿಕೊಳ್ಳುವುದು ಒಂದು ಬಗೆಯಾದರೆ, ತನ್ನ ಬದುಕಿನಲ್ಲಿ ಕಷ್ಟ -ನೋವು ಎದುರಾದಾಗ ಹತಚೇತನರಾಗಿ ಆತ್ಮಹತ್ಯೆಗೆ ಶರಣಾಗದೆ, ಭರವಸೆಯನ್ನು ಕಳೆದುಕೊಂಡು ಮನೋರೋಗಿಗಳಾಗದೆ ಆ ಕಷ್ಟವನ್ನೇ ಸವಾಲಿನಿಂದ ಸ್ವೀಕರಿಸಿ, ಮೆಟ್ಟಿನಿಂತು ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳುವುದು ಇನ್ನೊಂದು ಬಗೆ. ತ್ಯಾಗದಲ್ಲಿರುವ ಆನಂದ ಸ್ವಾರ್ಥದಲ್ಲಿಲ್ಲ, ಸೇವೆಯಲ್ಲಿರುವ ಆತ್ಮತೃಪ್ತಿ ಅಹಂಕಾರದಲ್ಲಿಲ್ಲ. ಎಂಬ ಅರಿವು ವ್ಯಕ್ತಿಗೆ ಉದಾತ್ತ ದೃಷ್ಟಿಕೋನವನ್ನು ನೀಡುತ್ತದೆ. ಆದ್ದರಿಂದ ಸಿನೆಮಾ, ದೂರದರ್ಶನ, ಕಾದಂಬರಿ ಎಲ್ಲವುಗಳ ಮೂಲಕ ಬರೀ ಪ್ರೀತಿ - ಪ್ರೇಮ- ಕಾಮ, ಬಟ್ಟೆ-ಆಭರಣಗಳ ವರ್ತುಲದಲ್ಲೇ ಸುತ್ತುವ ಜೀವನ ವಿಧಾನವನ್ನು ಏಕೈಕ ಆದರ್ಶವನ್ನಾಗಿ ಕಣ್ಣೆದುರಿಗೆ ಇರಿಸಿಕೊಳ್ಳದೆ, ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರಕ್ಕೆ ಇಳಿದು ಬಣ್ಣದ ಚಿಟ್ಟೆಗಳಂತೆ ಹಾರಾಡಿ, ಪತಂಗದಂತೆ ಭೋಗದ ಬೆಂಕಿಯೊಳಕ್ಕೆ ಬೀಳದೆ, ತ್ಯಾಗ - ಸಂಯಮ - ಸೇವೆಗಳ ತ್ರಿವೇಣಿ ಸಂಗಮವಾದರೆ ಅಂಥ ಮಹಿಳೆಯ ಬದುಕೂ ಸಾರ್ಥಕ, ಸಮಾಜಕ್ಕೂ ಅಪಾರವಾದ ಕೊಡುಗೆ.

ಸ್ವಯಂ ರಕ್ಷಣೆಗಾಗಿ ಸಮೂಹ ಜೀವನ

ಕೆಲವೊಂದು ಆದರ್ಶಗಳನ್ನು ಇಟ್ಟುಕೊಂಡು ಹೊರಟ ಅನೇಕ ಸಾಧಕರು ಆಸೆ - ಆಮಿಷ -ದೌರ್ಬಲ್ಯಗಳಿಗೆ ಬಲಿಯಾಗಿ ತಾವು ಹೊಂದಿದ್ದ ಆದರ್ಶಗಳನ್ನು ಮಧ್ಯದಲ್ಲೇ ಕೈಬಿಡುವುದುಂಟು. ಆದರ್ಶವಾದ ಒಂದು ಪರಂಪರೆಯ ಬಗ್ಗೆ ಬಹುಪಾಲು ಭಾರತೀಯರು ಬಹಳಷ್ಟು ಹೆಮ್ಮೆಯಿಂದ ಹೇಳಿಕೊಂಡರೂ ಸಾಧಕರ ಆರಂಭಿಕ ಜೀವನದಲ್ಲಿ ಚುಚ್ಚು ನುಡಿಗಳನ್ನಾಡಿ ಎದೆಗೆಡಿಸುವುದುಂಟು. ಬೆಳೆಯುವ ಸಸಿಗೆ ಬೇಲಿಯ ರಕ್ಷಣೆ ಅಗತ್ಯವಾದಂತೆ ಆದರ್ಶವಾದಿ ಸಾಧಕರಿಗೆ ಒಂದು ಹಂತದವರೆಗೆ ಆ ಪಥದಲ್ಲಿ ನಡೆದವರ, ನಡೆಯುವವರ ಸತ್ಸಂಗ ಅತ್ಯಗತ್ಯ. ಪರಿಸರದಲ್ಲಿರುವ ಎಲ್ಲಾ ಮುಳ್ಳನ್ನು ತೆಗೆಯಲು ಸಾಧ್ಯವಾಗದ ವ್ಯಕ್ತಿ ತನ್ನ ಕಾಲಿಗೆ ಚಪ್ಪಲಿ ಹಾಕಿಕೊಂಡು ಸ್ವಯಂ ರಕ್ಷಣೆ ಪಡೆದುಕೊಂಡಂತೆ ಆದರ್ಶವಾದಿಯೂ ಸಮಾನ ಚಿಂತಕರ ಮಧ್ಯೆ ಇರುತ್ತ, ಸ್ವಾಧ್ಯಾಯದ ಪರಿಪಾಠ ಬೆಳೆಸಿಕೊಳ್ಳಬೇಕು. ಬೆಟ್ಟದ ಮೇಲೆ ಮನೆಯ ಮಾಡಿ ಮೃಗಗಳಿಗೆ ಅಂಜದೆ ಬದುಕುವ ಕಲೆಯನ್ನು ಗಿರಿವಾಸಿಯು ಅಳವಡಿಸಿಕೊಳ್ಳುವಂತೆ ಸುತ್ತಿಗೆ ಹಿಗ್ಗದೆ ನಿಂದೆಗೆ ಕುಗ್ಗದೆ ಸೇವಾವ್ರತಧಾರಿ ಮುಂದೆಸಾಗಬೇಕು. ವೀರ ವಿರಾಗಿಣಿ ಅಕ್ಕಮಹಾದೇವಿ ಹೇಳುವ ಮಾತು.

ಹೆದರದಿರು ತನುವೆ, ಬೆದರದಿರು ಮನವೆ
ನಿಜವನರಿದು ನಿಶ್ಚಿಂತವಾಗಿರಲೆ ಮನವೆ
ಫಲವಾದ ಮರನ ಇಡುವರೊಂದು ಕೋಟಿ
ಎಲುವದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿ ಇಲ್ಲದವರ ಬೈವರೊಬ್ಬರ ಕಾಣೆ
ಚನ್ನಮಲ್ಲಿಕಾರ್ಜುನಾ, ನಿಮ್ಮ ಶರಣರ ನುಡಿಯೆ
ಎನಗೆ ಗತಿಮತಿ ಸೋಪಾನ.

ಎಂಬುದು ಆದರ್ಶವಾದಿಗಳಿಗೆ ದಾರಿ ದೀಪ. ಮಹಿಳೆ ಕೇವಲ ಹುಟ್ಟಿದ ಮನೆ ಕೊಟ್ಟ ಮನೆಗಷ್ಟೇ ನಂದಾದೀಪವಾಗದೆ ತ್ಯಾಗ - ಸೇವೆಗಳಿಂದ ಅಸಂಖ್ಯಾತರ ಬಾಳಿಗೆ ಬೆಳಕಾಗುವುದೇ ಅತ್ಯಂತ ಶ್ರೇಯಸ್ಕರ.

- ಮಾತಾಜಿ

ಕಲ್ಯಾಣ ಪರ್ವದಲ್ಲಿ ವಿಶೇಷ ಕಾರ್ಯಕ್ರಮ

ದಿ.12-10-2008ರಂದು ಮಧ್ಯಾಹ್ನ 3 ಗಂಟೆಯಿಂದ ರಾಷ್ಟ್ರೀಯ ಬಸವ ದಳದ ಸಮಾವೇಶ ಏರ್ಪಡಿಸಲಾಗುವುದು. ಎಲ್ಲ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಬೇಕು, ರಾಷ್ಟ್ರೀಯ ಬಸವ ದಳಗಳು ಕುಂಠಿತವಾಗಿದ್ದರೆ ಅವುಗಳನ್ನು ಪುನರುತ್ಥಾನ ಮಾಡುವ ಕುರಿತು ಮತ್ತು ನೂತನ ಬಸವ ದಳಗಳನ್ನು ಆರಂಭಿಸುವ ಬಗ್ಗೆ ವಿಶೇಷ ಚರ್ಚೆ ನಡೆಯುವುದು. ಸಲಹೆ - ಸೂಚನೆ ನೀಡುವವರಿಗೆ ಅವಕಾಶವಿದೆ.

ಮರಾಠಿ ಭಾಷೆಯಲ್ಲಿ ಕಾರ್ಯಕ್ರಮ

ಗಡಿನಾಡಿನವರಿಗೆ ಬಿಟ್ಟರೆ ಉಳಿದಂತೆ ಮಹಾರಾಷ್ಟ್ರದ ಒಳನಾಡಿನವರಿಗೆ ಕನ್ನಡವನ್ನು ಬರೆಯಲು ಮತ್ತು ಓದಲು ಬರುವುದಿಲ್ಲ. ಧಾರ್ಮಿಕ ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ ರದ್ದುಮಾಡಿ ದಿ.13-10-2008ರಂದು ಮಧ್ಯಾಹ್ನ 3 ರಿಂದ ಪೂರ್ತಿಯಾಗಿ ಮರಾಠಿಯಲ್ಲೇ ಸಂಜೆ 6ರವರೆಗೆ ವಿಚಾರ ಗೋಷ್ಠಿಯು ನಡೆಯುವುದು. ಸಂಘಟನೆಗೆ ಇದು ಅನಿವಾರ್ಯವಾದ್ದರಿಂದ ಎಲ್ಲರೂ ಸಹಕರಿಸಬೇಕು.

ಮನ್ಮಥ ಸ್ವಾಮಿಗಳ ಸ್ಥಾನದಿಂದ ಜ್ಯೋತಿಯಾತ್ರೆ

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಮಾಂಜರಸುಂಬಾ ಬಳಿಯಲ್ಲಿನ ಗುಡ್ಡಗಳ ಮಧ್ಯೆ ಇರುವ ಕಪಿಲಧಾರಾ ಒಂದು ಸುಂದರ ದೃಶ್ಯ ಕಾವ್ಯವನ್ನೊಳಗೊಂಡ ಸುಕ್ಷೇತ್ರ. ಕಣಿವೆ ಪ್ರದೇಶದಲ್ಲಿರುವ ಇಲ್ಲಿ ಎತ್ತರವಾದ ಪ್ರದೇಶದಿಂದ ದಬೆದಬೆ (ಜಲಪಾತ) ಬೀಳುತ್ತದೆ. ಮನ್ಮಥ ಸ್ವಾಮಿಗಳೆಂಬ ವಿರಕ್ತರು ತಪಸ್ಸು ಮಾಡಿ, ಐಕ್ಯರಾದ ಸಮಾಧಿ ಇದೆ.

ಕಪಿಲಧಾರಾದಿಂದ ದಿ.21-9-2008ರಂದು ಮನ್ಮಥ ಸ್ವಾಮಿ ಜ್ಯೋತಿ ಹೊರಟು ಸಂಚರಿಸುತ್ತಾ ಕಲ್ಯಾಣದತ್ತ ಬರುತ್ತಿದೆ. ಮಹಾರಾಷ್ಟ್ರದ ಅಲ್ಲಮಗಿರಿಯ ಚರಜಂಗಮರಾದ ಪೂಜ್ಯ ಶ್ರೀ ಬಸವಲಿಂಗ ಸ್ವಾಮೀಜಿ, ಬೆಂಗಳೂರು ಬಸವ ಮಂಟಪದ ಜಂಗಮಮೂರ್ತಿ ಪೂಜ್ಯ ಶ್ರೀ ಜ್ಞಾನೇಶ್ವರಿ ಮಾತಾಜಿಯವರ ನೇತೃತ್ವದಲ್ಲಿ ಸಂಚರಿಸುತ್ತಿರುವ ಈ ಜ್ಯೋತಿಯನ್ನು ದಿ.21ರಂದು ಮನ್ಮಥ ಸ್ವಾಮಿಗಳ ಗದ್ದುಗೆಯಲ್ಲಿನ ದೀಪದಿಂದ ಹಚ್ಚಿಕೊಳ್ಳಲಾಯಿತು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಜ್ಯೋತಿಯಾತ್ರೆಯನ್ನು ಉದ್ಘಾಟಿಸಿದರು. ಉದಗೀರಿನ ಲಕ್ಷ್ಮಿಬಾಯಿ ಪಾಂಡ್ರೆ, ಪಂಚಯ್ಯ ಸ್ವಾಮಿ, ಗುಣವಂತಿ ಮಿಠಾರೆ, ಇಚಲಕರಂಜಿಯ ನಂದಾ ಎಲಾಜ ಮುಂತಾದ ಶರಣ ಬಂಧುಗಳೆಲ್ಲರೂ ಜ್ಯೋತಿಯಾತ್ರೆಯಲ್ಲಿ ಸಂಚರಿಸುತ್ತಿದ್ದಾರೆ.

ಅಕ್ಕನ ಅಮರವಾಣಿ

ಪಡೆವುದರಿದು ನರಜನ್ಮವ।
ಪಡೆವುದರಿದು ಗುರುಕಾರುಣ್ಯವ।
ಪಡೆವುದರಿದು ಲಿಂಗ ಜಂಗಮ ಸೇವೆಯ।
ಚನ್ನಮಲ್ಲಿಕಾರ್ಜುನಯ್ಯನ ಶರಣರ ಸಂಗದಲ್ಲಿ
ನಲಿದಾಡು ಕಂಡೆಯಾ ಎಲೆ ಮನವೆ!

ವಚನ ದುಂದುಭಿ -17

- ಶರಣ ಸಚ್ಚಿದಾನಂದ ಚಟನಳ್ಳಿ

1. ಗುರು ಬಸವಣ್ಣನವರು ಲಿಂಗೈಕ್ಯರಾದ ಮೇಲೂ ಅವರ (ಬೆಳಕಿನ ಶರೀರದ)ದರ್ಶನ ಪಡೆದ ನಾಲ್ಕು ಜನ ಮಹಾತ್ಮರು ಯಾರು?
2. ಪ್ರಸಾದಿ ಸ್ಥಲವನ್ನು ಪ್ರಧಾನವಾಗಿ ಅಳವಡಿಸಿಕೊಂಡ ಅನುಭವ ಮಂಟಪದ ಶರಣ ಯಾರು?
3. ವಚನಸಾಹಿತ್ಯದಲ್ಲಿ ಗುರು ಬಸವಣ್ಣನವರ ನಂತರ ಹೆಚ್ಚಾಗಿ ಸ್ತುತಿಸಲ್ಪಟ್ಟವರು ಯಾರು?
4. "ಉಮರಾಣಿ" ಇದು ಯಾವ ಶರಣರಿಗೆ ಸಂಬಂಧಿಸಿದ ಊರು
5. ಸಂಚಿತ ಕರ್ಮವೆಂದರೇನು?
6. ಚತುರ್ವಿಧ ಪೂರ್ವಾಶ್ರಯ ಕಳೆಯುವುದೆಂದರೇನು?
7. "ಉಸುರಿನ ಪರಿಮಳವಿರಲು ಕುಸುಮದ ಹಂಗೇತಕ್ಕಯ್ಯಾ" ಇದು ಯಾರ ವಚನ.
8. ಗಣಾಚಾರವೆಂದರೇನು ?
9. ತ್ರಿವಿಧ ಸಂಪತ್ತುಗಳು ಯಾವುವು ?
10. ಬಸವ ಪಂಚಮಿಯನ್ನು ಸಾರ್ವತ್ರಿಕವಾಗಿ ಆಚರಣೆಗೆ ತಂದವರು ಯಾರು?
11. "ಸ್ವಯವನರಿಯುವುದು" ಎಂದರೇನು?
12. "ಲಿಂಗಾರ್ಚನೆಯ ಮಾಡುವೆನಯ್ಯಾ ಜಂಗಮ ಎನ್ನ ಮಠಕ್ಕೆ ಬರಬೇಕೆಂದು, ಆ ಜಂಗಮವೆನ್ನ ಮಠಕ್ಕೆ ಬಂದರೆ ಲಿಂಗಾರ್ಚನೆಯ ಮಾಣ್ದು ಜಂಗಮಾರ್ಚನೆಯ ಮಾಡುವೆ ನಾನಿನ್ನು ಭವಭವಾಂತರದಲ್ಲಿ ನಿಮ್ಮ ಜಂಗಮಾರ್ಚನೆಯ ಮಾಡುವೆನಯ್ಯಾ" ಎಂದು ಯಾರು ಯಾರಿಗೆ ಹೇಳಿದರು ?
13. "ಆರಂಬವ ಮಾಡುವೆ ಗುರು ಪೂಜೆಗೆಂದು" ಎನ್ನುವ ವಚನದಲ್ಲಿ ಆರಂಬ ಎಂದರೇನು?
14. ಷಟ್‌ಗುಣಗಳು ಯಾವುವು ?
15. ಆಮುಗಿದೇವಯ್ಯನವರ ವಚನಾಂಕಿತವೇನು?

ವಚನ ದುಂದುಭಿ -16ರ ಸರಿ ಉತ್ತರಗಳು

1. ಗುರು ಚನ್ನಬಸವಣ್ಣನವರ ನುಡಿ
2. ಗುರು ಚನ್ನಬಸವಣ್ಣನವರ ನುಡಿ
3. ಗುರು ಚನ್ನಬಸವಣ್ಣನವರ ವಚನ
4. ಗುರು, ಲಿಂಗ ಜಂಗಮ
5. ಹಸಿವು-ನೀರಡಿಕೆ, ಶೋಕ - ಮೋಹ, ಮುಪ್ಪು-ಮರಣ
6. ಆವಿಗೆಯೊಳಗಿನ ಮಡಕೆಗಳಂತೆ ಪಾಪಿಗಳನ್ನು ಬೇಯಿಸುವ ನರಕ
7. ಗುರು ಸಿದ್ಧರಾಮೇಶ್ವರರನ್ನು
8. ಸಿದ್ಧರಾಮೇಶ್ವರರು ಅಲ್ಲಮಪ್ರಭುದೇವರಿಗೆ
9. ಆಯ್ದಕ್ಕಿ ಮಾರಯ್ಯ ಗುರು ಬಸವಣ್ಣನವರಿಗೆ ಹೇಳಿದ ಮಾತು
10. ಸತ್ಯ ಶುದ್ಧ ಕಾಯಕ ಮಾಡುತ್ತ ಗಳಿಕೆಯ ಒಂದು ಪಾಲನ್ನು ಸಮಾಜ ಮತ್ತು ಧರ್ಮದ ಉನ್ನತಿಗೆ ಬಳಸುವ ಭಕ್ತನ ಆಚಾರವೇ ಸದಾಚಾರ
11. ಪರಮಗುರು ಪಡುಮಿಡಿ ಸಿದ್ಧಮಲ್ಲಿನಾಥ ಪ್ರಭುವೆ
12. ವೀರ ಸಂಗಯ್ಯನವರ ವಚನಾಂಕಿತ
13. ಆವಕುಲವಾದಡೇನು? ಲಿಂಗವಿದ್ದವನೆ ಕುಲಜನು
ಕುಲವನರಸುವರೆ ಶರಣರಲ್ಲಿ ಜಾತಿ ಸಂಕರನಾದ ಬಳಿಕ ?
ಒಕ್ಕುದಕೊಂಬೆನವರಲ್ಲಿ ಕೂಸ ಕೊಡುವೆ ಅವರಿಗೆ
ಲಿಂಗದೇವಾ ನಂಬುವೆ ನಿಮ್ಮ ಶರಣರನು.
14. ಶರಣರ ಸಂಗದಲ್ಲಿ ಅನುಭಾವ
15. ಏಕಗುರು ಮತ್ತು ಏಕದೇವ ನಿಷ್ಠೆ

ವಚನ ದುಂದುಭಿ -16ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ, ಬೆಂಗಳೂರು
2. ಪುಷ್ಪಾ ಸಿದ್ದರಾಮಪ್ಪ ಪಾಟೀಲ್,ಬೆಂ
3. ರತ್ನಮ್ಮ ಜಯಣ್ಣ ಮೈಸೂರು.
4. ಚಂದ್ರಿಕಾ, ಭದ್ರಾವತಿ

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2009 ರ ಜನವರಿ 11, 12, 13, 14, 15ರಂದು ನಡೆಯಲಿರುವ ಇಪ್ಪತ್ತೆರಡನೆ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2009 ನೆಯ ಇಸವಿಯ ಡಿ.11ರಿಂದ 15ರವರೆಗೆ ನಡೆಯುವ 22 ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2009 ನೆಯ ಇಸವಿಯ 22 ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	01-11-2008	ಶರಣ(ಶನಿ)ವಾರ	ವಿಜಯಪುರ
2.	02-11-2008	ದೇವ(ಭಾನು)ವಾರ	ತುರುವೇಕೆರೆ
3.	03-11-2008	ಶಿವ(ಸೋಮ)ವಾರ	ರಾಮದಿಹಳ್ಳಿ
4.	04-11-2008	ಬಸವ(ಮಂಗಳ)ವಾರ	ಗುಡಿಗೊಂಡನಹಳ್ಳಿ

5.	05-11-2008	ಚನ್ನ(ಬುಧ)ವಾರ	ನಾಗರಘಟ್ಟ
6.	06-11-2008	ಪ್ರಭು (ಗುರು)ವಾರ	ಚಿಕ್ಕಮಗಳೂರು
7.	07-11-2008	ಮಾತೃ (ಶುಕ್ರ)ವಾರ	ರಾಬದಳ
8.	08-11-2008	ಶರಣ (ಶನಿ)ವಾರ	,,
9.	09-11-2008	ದೇವ (ರವಿ)ವಾರ	,,
10.	10-11-2008	ಶಿವ (ಸೋಮ)ವಾರ	,,
11.	11-11-2008	ಬಸವ (ಮಂಗಳ)ವಾರ	,,
12.	12-11-2008	ಚನ್ನ (ಬುಧ)ವಾರ	ಶಿವಮೊಗ್ಗ
13.	13-11-2008	ಪ್ರಭು (ಗುರು)ವಾರ	,,
14.	14-11-2008	ಮಾತೃ (ಶುಕ್ರ)ವಾರ	ಭದ್ರಾವತಿ
15.	15-11-2008	ಶರಣ (ಶನಿ)ವಾರ	,,
16.	16-11-2008	ದೇವ (ಭಾನು)ವಾರ	ದಾವಣಗೆರೆ
17.	17-11-2008	ಶಿವ (ಸೋಮ)ವಾರ	ಚಿತ್ರದುರ್ಗ
18.	18-11-2008	ಬಸವ (ಮಂಗಳ)ವಾರ	ಹಿರಿಯೂರು
19.	19-11-2008	ಚನ್ನ (ಬುಧ)ವಾರ	ದೊಡ್ಡಉಳಾರ್ತಿ
20.	20-11-2008	ಪ್ರಭು (ಗುರು)ವಾರ	ಚಿತ್ರನಾಯ್ಕನ ಹಳ್ಳಿ
21.	21-11-2008	ಮಾತೃ (ಶುಕ್ರ)ವಾರ	ಚಳ್ಳಕೆರೆ
22.	22-11-2008	ಶರಣ (ಶನಿ)ವಾರ	ಬಳ್ಳಾರಿ
23.	23-11-2008	ದೇವ (ಭಾನು)ವಾರ	,,
24.	24-11-2008	ಶಿವ (ಸೋಮ)ವಾರ	ಶಿರಗುಪ್ಪ
25.	25-11-2008	ಬಸವ (ಮಂಗಳ)ವಾರ	ರಾಯಚೂರು
26.	26-11-2008	ಚನ್ನ (ಬುಧ)ವಾರ	ಶಕ್ತಿನಗರ
27.	27-11-2008	ಪ್ರಭು (ಗುರು)ವಾರ	ಗಂಗಾವತಿ
28.	28-11-2008	ಮಾತೃ (ಶುಕ್ರ)ವಾರ	ಕೊಪ್ಪಳ
29.	29-11-2008	ಶರಣ (ಶನಿ)ವಾರ	,,
30.	30-11-2008	ದೇವ (ರವಿ)ವಾರ	,,
31.	01-12-2008	ಶಿವ (ಸೋಮ)ವಾರ	ಹುಬ್ಬಳ್ಳಿ
32.	02-12-2008	ಬಸವ (ಮಂಗಳ)ವಾರ	ಧಾರವಾಡ
33.	03-12-2008	ಚನ್ನ (ಬುಧ)ವಾರ	ಅವರಾದಿ
34.	04-12-2008	ಪ್ರಭು (ಗುರು)ವಾರ	ಸವದತ್ತಿ
35.	05-12-2008	ಮಾತೃ (ಶುಕ್ರ)ವಾರ	,,
36.	06-12-2008	ಶರಣ (ಶನಿ)ವಾರ	ಬೈಲಹೊಂಗಲ
37.	07-12-2008	ದೇವ (ರವಿ)ವಾರ	ಬೆಳಗಾವಿ
38.	08-12-2008	ಶಿವ (ಸೋಮ)ವಾರ	ಬೆಳಗಾವಿ

39.	09-12-2008	ಬಸವ (ಮಂಗಳ)ವಾರ	,,
40.	10-12-2008	ಚನ್ನ (ಬುಧ)ವಾರ	,,
41.	11-12-2008	ಪ್ರಭು (ಗುರು)ವಾರ	ಸಂಕೇಶ್ವರ
42.	12-12-2008	ಮಾತೃ (ಶುಕ್ರ)ವಾರ	ಗಡಿಹಿಂಗ್ಲಾಜ್
43.	13-12-2008	ಶರಣ (ಶನಿ)ವಾರ	ಗೋಕಾಕ್
44.	14-12-2008	ದೇವ (ರವಿ)ವಾರ	,,
45.	15-12-2008	ಶಿವ (ಸೋಮ)ವಾರ	,,
46.	16-12-2008	ಬಸವ (ಮಂಗಳ)ವಾರ	,,
47.	17-12-2008	ಚನ್ನ (ಬುಧ)ವಾರ	ಶೇಗುಣಸಿ
48.	18-12-2008	ಪ್ರಭು (ಗುರು)ವಾರ	ಶಂಕರಹಟ್ಟಿ
49.	19-12-2008	ಮಾತೃ (ಶುಕ್ರ)ವಾರ	ಖಿವಟಕೊಪ್ಪ
50.	20-12-2008	ಶರಣ (ಶನಿ)ವಾರ	ತಾಂವಶಿ
51.	21-12-2008	ದೇವ (ರವಿ)ವಾರ	ಕನಮಡಿ
52.	22-12-2008	ಶಿವ (ಸೋಮ)ವಾರ	ಕಗ್ಗೋಡ
53.	23-12-2008	ಬಸವ (ಮಂಗಳ)ವಾರ	ಬಿಜಾಪುರ
54.	24-12-2008	ಚನ್ನ (ಬುಧ)ವಾರ	ಗುಲಬರ್ಗಾ
55.	25-12-2008	ಪ್ರಭು (ಗುರು)ವಾರ	,,
56.	26-12-2008	ಮಾತೃ (ಶುಕ್ರ)ವಾರ	ಯಲಮಾಮಿಡಿ
57.	27-12-2008	ಶರಣ (ಶನಿ)ವಾರ	ಉದಗೀರ್
58.	28-12-2008	ದೇವ (ರವಿ)ವಾರ	ಬೀದರ್
59.	29-12-2008	ಶಿವ (ಸೋಮ)ವಾರ	,,
60.	30-12-2008	ಬಸವ (ಮಂಗಳ)ವಾರ	ಜಹಿರಾಬಾದ್
61.	31-01-2008	ಚನ್ನ (ಬುಧ)ವಾರ	ಹೈದ್ರಾಬಾದ್
62.	01-01-2009	ಪ್ರಭು (ಗುರು)ವಾರ	ಹೈದ್ರಾಬಾದ್
63.	02-01-2009	ಮಾತೃ (ಶುಕ್ರ)ವಾರ	,,
64.	03-01-2009	ಶರಣ (ಶನಿ)ವಾರ	,,
65.	04-01-2009	ದೇವ (ರವಿ)ವಾರ	,,
66.	05-01-2009	ಶಿವ (ಸೋಮ)ವಾರ	,,
67.	06-01-2009	ಬಸವ (ಮಂಗಳ)ವಾರ	,,
70.	07-01-2009	ಚನ್ನ (ಬುಧ)ವಾರ	,,
71.	08-01-2009	ಪ್ರಭು (ಗುರು)ವಾರ	,,
72.	09-01-2009	ಮಾತೃ (ಶುಕ್ರ)ವಾರ	,,
73.	10-01-2009	ಶರಣ (ಶನಿ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ



[illegible] ಜೈನ ಧರ್ಮದ ತೇರಾಪಂಥದ ಜೀವನ ವಿಜ್ಞಾನ ಅಕ್ಯಾಡಮಿಯು [illegible] ಸರ್ವಧರ್ಮ ಸಮ್ಮೇಳನದ [illegible] [illegible] ಪೇಜಾವರ ಶ್ರೀಗಳು, ಮೂಡಬಿದರೆಯ ಚಾರುಕೀರ್ತಿ ಸ್ವಾಮೀಜಿ, [illegible] ಸ್ವಾಮೀಜಿ ಮುಂತಾದವರು [illegible]







CPMG/KA/BGW-WPP(W)17-R.No.19980/

